# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಅಕ್ಟೋಬರ್-2013
ಬೆಲೆ ರೂ. 1



## ಸಂಘದಲ್ಲಿ ನೂತನ ಆರ್ಟ್ ಗ್ಯಾಲರಿ

ಅಭಿಮತ ಸಂಪಾದಕ ಮಂಡಳಿ

ಬಾಲಕೃಷ್ಣ ನಾಯ್ಕ್ ಡಿ.
ಸವಿತಾ ಇನಾಮದಾರ್
ಪ್ರಕಾಶ್ ಶೆಟ್ಟಿ ಉಳೆಪಾಡಿ

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 24 ಸಂಚಿಕೆ 1
ಅಕ್ಟೋಬರ್ 2013, ಬೆಲೆ ರೂ. 1

## ನೇರ ಮಾತು

ಬದುಕನ್ನು ಅರಸಿ ಉದ್ಯೊಗ, ವಹಿವಾಟುಗಳಿಗಾಗಿ ಕನ್ನಡ ನಾಡಿನಿಂದ ವಲಸೆ ಹೋಗಿ ದೇಶ, ವಿದೇಶಗಳ ಮೂಲೆ ಮೂಲೆಗಳಲ್ಲಿ ನಮ್ಮವರು ನೆಲೆ ಕಂಡುಕೊಂಡಿದ್ದಾರೆ. ಹಲವು ದಶಕಗಳ ಹಿಂದೆ ದೆಹಲಿಗೆ ವಲಸೆ ಬಂದ ನಮ್ಮ ತಲೆಮಾರಿನ ನಂತರದ ಬಹಳಷ್ಟು ಮಂದಿ ಕನ್ನಡ ನಾಡಿನ ಸಂಪರ್ಕವನ್ನು ಹೆಚ್ಚು ಇಟ್ಟುಕೊಳ್ಳದೆ ತಾವು ನೆಲೆಸಿದ ನಗರದ ವಾತಾವರಣ ಮತ್ತು ಸಂಸ್ಕೃತಿಗೆ ಒಗ್ಗಿಕೊಂಡು 'ನಮ್ಮ ಸಂಸ್ಕೃತಿ'ಯನ್ನು ಮರೆತು ಬಿಟ್ಟಿದ್ದಾರೆ. ಮಾತ್ರವಲ್ಲ, ಕನ್ನಡೇತರರ ಜತೆ ವಿವಾಹ ಮುಂತಾದ ಸಾಂಸಾರಿಕ ಸಂಬಂಧಗಳನ್ನು ಹೊಂದಿ ಜೀವನ ಸಾಗಿಸುವ ಮೂಲಕ ಅಲ್ಲಿಯ 'ಸಂಸ್ಕಾರ'ವನ್ನೇ ತನ್ನದಾಗಿಸಿಕೊಂಡಿದ್ದಾರೆ. ಅವರಿಗೆ ಕರ್ನಾಟಕ ವರ್ಷಕ್ಕೊಮ್ಮೆ ಅಥವಾ ಕೆಲವು ವರ್ಷಗಳಿಗೊಮ್ಮೆ ರಜಾದಿನಗಳನ್ನು ಕಳೆಯಲು ಬರುವ 'ಪ್ರವಾಸತಾಣ'ವಾಗಿ ಬಿಟ್ಟಿದೆ. ಆದರೆ, ಕನ್ನಡ ಮತ್ತು ಕರ್ನಾಟಕದ ಮೇಲಿನ ಮಮತೆಯನ್ನು ಇಟ್ಟುಕೊಂಡ ಬಹಳಷ್ಟು ಕನ್ನಡಿಗರು ತಮ್ಮ ಮಕ್ಕಳು ಎಲ್ಲೇ ಹುಟ್ಟಿ ಬೆಳೆದಿರಲಿ ಅವರಿಗೆ ತಮ್ಮ ಭಾಷೆಯನ್ನು ಕಲಿಸಿ ಬೆಳೆಸುವ ಮೂಲಕ ಕನ್ನಡ ನಾಡಿನ 'ಸಂಸ್ಕೃತಿ'ಯನ್ನು ಜೀವಂತವಾಗಿ ಉಳಿಸಿಕೊಳ್ಳುವ ಪ್ರಯತ್ನವನ್ನು ಮಾಡಿದ್ದಾರೆ.

ಇತ್ತೀಚೆಗೆ ದೆಹಲಿ ಕರ್ನಾಟಕ ಸಂಘದಲ್ಲಿ ಭರತ ನಾಟ್ಯ ಕಾರ್ಯಕ್ರಮವನ್ನು ನೀಡಿದ ಶ್ರೀಮತಿ ಶಾರದಾ ವೆಂಕಟ್ ಅವರು ಹುಟ್ಟಿ ಬೆಳೆದಿರುವುದು ಹೈದರಾಬಾದಿನಲ್ಲಿ. ಆದರೂ ಅವರು ನಿರರ್ಗಳವಾಗಿ ಕನ್ನಡವನ್ನು ಮಾತನಾಡಬಲ್ಲರು. ಅವರ ಪತಿ ಶ್ರೀ ವೆಂಕಟ್ ಅವರ ಪೂರ್ವಜರು ಕರ್ನಾಟಕದವರು. ಅವರಿಗೂ ಕನ್ನಡ ತಿಳಿಯದು. ಅವರೂ ಹೈದರಾಬಾದಿನಲ್ಲೇ ಹುಟ್ಟಿ ಬೆಳೆದವರು. ತೆಲುಗು ಚೆನ್ನಾಗಿ ಮಾತನಾಡಬಲ್ಲವರು. ಭರತನಾಟ್ಯ ಆಯೋಜಿಸುವ ಕುರಿತಾಗಿ ದೆಹಲಿ ಕರ್ನಾಟಕ ಸಂಘಕ್ಕೆ ಮೂರ್ನಾಲ್ಕು ಬಾರಿ ಬಂದ ಶ್ರೀ ವೆಂಕಟ್ ಅವರು ಈಗ ಅಲ್ಪ ಸ್ವಲ್ಪ ಕನ್ನಡ ಮಾತನಾಡತೊಡಗಿದ್ದಾರೆ. ಮುಂದಿನ ಸ್ವಲ್ಪ ಸಮಯದಲ್ಲಿಯೇ ಸಂಪೂರ್ಣ ಕನ್ನಡ ಮಾತನಾಡುವ ಭರವಸೆ ನೀಡಿದ್ದಾರೆ.

ದೆಹಲಿಯಲ್ಲೇ ಹುಟ್ಟಿ ಬೆಳೆದ ಬಹುತೇಕ ಕನ್ನಡನಾಡಿನ ಮಕ್ಕಳಿಗೆ ಕನ್ನಡ ಓದಲು ಅಥವಾ ಬರೆಯಲು ಬರುವುದಿಲ್ಲ. ಹೆಚ್ಚೇಕೆ ಕನ್ನಡದ ಕಾರ್ಯಕ್ರಮಗಳಿಗೆ ಬರಲು ಅವರು ಆಸಕ್ತರಿಲ್ಲ. ಇಂತಹ ಯುವ ಪೀಳಿಗೆಯು ಕರ್ನಾಟಕದ ಸಂಸ್ಕೃತಿಯೊಂದಿಗೆ ಸ್ಪಂದಿಸಲು ದೆಹಲಿ ಕರ್ನಾಟಕ ಸಂಘವು ಒಂದು ವಿಶೇಷ ಕಾರ್ಯಕ್ರಮ'ಹಾಗೂ ನಿರಂತರ ನಾಟಕ'ಎನ್ನುವ ಇನ್ನೊಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಈ ಎರಡೂ ಕಾರ್ಯಕ್ರಮಗಳಿಗೆ ಭಾಷೆಯ ನಿರ್ಬಂಧ ಅಷ್ಟೇನೂ ಇಲ್ಲ. ಕನ್ನಡದ ಜೊತೆಗೆ ಹಿಂದಿ, ಮರಾಠಿ, ತೆಲುಗು, ತುಳು, ಕೊಂಕಣಿ ಮುಂತಾದ ಇತರ ಭಾಷೆಗಳಲ್ಲಿ ಕಾರ್ಯಕ್ರಮವನ್ನು ನೀಡಬಹುದು. ಆದರೆ ಅವರು ಮಾತ್ರ ಮೂಲತಃ ಕರ್ನಾಟಕದವರಾಗಿರಬೇಕು.

ಇದು ನಾವು ಹೊರನಾಡಿನಲ್ಲಿ ಮರೆಯಾಗುತ್ತಿರುವ ಕನ್ನಡಿಗರನ್ನು ಮತ್ತೆ ಕನ್ನಡಿಗರನ್ನಾಗಿಸುವ ಪ್ರಯತ್ನ. ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***

## ಮುನ್ನೋಟ

ಸೆಪ್ಟಂಬರ್ ತಿಂಗಳಿನಲ್ಲಿ ರಾಷ್ಟ್ರಪ್ರಶಸ್ತಿ ಪಡೆದ 15 ಕರ್ನಾಟಕದ ಶಿಕ್ಷಕರಿಗೆ ಅಭಿನಂದನೆ, ಗಣೇಶ ಸಾಂಸ್ಕೃತಿಕ ಹಬ್ಬ ಹಾಗೂ ಶಾರದ ವೆಂಕಟ್ ಅವರ ಭರತನಾಟ್ಯ ಕಾರ್ಯಕ್ರಮ ಮತ್ತು ಭೀಮಸೇನ್ ಭಜಂತ್ರಿ ಅವರ ಸಂಗೀತ ಕಾರ್ಯಕ್ರಮ, ಕೇಂದ್ರ ಸಚಿವರಾದ ಡಾ.ಆಸ್ಕರ್ ಫರ್ನಾಂಡಿಸ್ ಅವರಿಂದ ನೂತನ ಆರ್ಟ್ ಗ್ಯಾಲರಿ ಉದ್ಘಾಟನೆ ಜೊತೆಗೆ ಕರ್ನಾಟಕದ ಹಿರಿಯ ಸಾಹಿತಿ ಹಂಪ ನಾಗರಾಜಯ್ಯ ಅವರ ಪಾಲ್ಗೊಳ್ಳುವಿಕೆ, ದೆಹಲಿಯ ಕನ್ನಡದ ಹೆಸರಾಂತ ಚಿತ್ರಕಲಾವಿದರಾದ ಅನಿತಾ ಕುಲಕರ್ಣಿ, ಅನುನಾಯಕ್, ಅಪೂರ್ವ ಸುಬ್ಬಣ್ಣ, ಅರುಣ್ ಕುಮಾರ್ ಎಚ್.ಜಿ, ಭೀಮರಾವ್ ಮುರಗೋಡ, ಚೆನ್ನು ಎಸ್. ಮಠದ, ದೀಪಕ್ ಗುಡ್ಡದಕೇರಿ, ಗೀತಾ ರಾಮಶೇಷ್, ಈರಣ್ಣ ಜಿ.ಆರ್., ಕುಲಕರ್ಣಿ ಎಂ.ಎಸ್, ಮಂಜುನಾಥ್ ಕಾಮತ್, ಸಫಲ್ ಮಾಣೆಕಾಪುರೆ, ಶಾಲನ್ ಮುರಗೋಡ, ಶ್ರೀಕಾಂತ್ ಪೋದ್ದಾರ, ಸಿದ್ದಾರ್ಥ ಪಿ. ಬೆಟ್ಟಜೇವರ್ಗಿ, ಕೆ.ಆರ್.ಸುಬ್ಬಣ್ಣ, ಸುಧೀರ್ ಘಡ್ನೀಸ್, ವಿಲಾಸ್ ಕುಲಕರ್ಣಿ ಅವರಿಂದ 15 ದಿನಗಳ ಚಿತ್ರಕಲಾ ಪ್ರದರ್ಶನ, ಸಾಹಿತ್ಯ ವೈವಿಧ್ಯ ಕಾರ್ಯಕ್ರಮ, ಸಂಘದ ಸದಸ್ಯರಿಂದ ಚಂಡೀಗಢ ಕನ್ನಡ ಸಂಘದಲ್ಲಿ ಸಂಗೀತ ಮತ್ತು ಭರತನಾಟ್ಯ ಕಾರ್ಯಕ್ರಮ, ರಂಗ ತರಬೇತಿ ಶಿಬಿರ ಆರಂಭ ಮತ್ತು ಪಂಡಿತ್ ಬಿ.ಎಸ್. ಮಠ ಹಾಗೂ ವಿದೂಷಿ ಅಕ್ಕಮಹಾದೇವಿ ಮಠ ಅವರಿಂದ ವಯಲಿನ್ ವಾದನ ಕಾರ್ಯಕ್ರಮ, ಕನ್ನಡದ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ. ಹೀಗೆ ನಿರಂತರವಾಗಿ ಯಶಸ್ವಿ ಕಾರ್ಯಕ್ರಮಗಳನ್ನು ನೀಡುವ ಪ್ರಯತ್ನ ಮಾಡಿದ್ದೇವೆ. ಸಂಘವನ್ನು ಅತ್ಯುತ್ತಮ ಸಾಂಸ್ಕೃತಿಕ ಸಮುಚ್ಚಯವನ್ನಾಗಿ ಮಾಡಬೇಕೆಂಬ ಅಧ್ಯಕ್ಷರ ಕಲ್ಪನೆಗೆ ಕಾರ್ಯಕಾರಿ ಸಮಿತಿಯ ಎಲ್ಲರೂ ಕಂಕಣ ಬದ್ಧರಾಗಿ ದುಡಿಯುತ್ತಿದ್ದೇವೆ.

ಸ್ಥಳೀಯ ಕಲಾವಿದರಿಗೆ, ಬರಹಗಾರರಿಗೆ ಆದ್ಯತೆ ನೀಡಿ ಕಾರ್ಯಕ್ರಮ ಮಾಡುವ ಬಯಕೆ ನಮ್ಮದಾಗಿದ್ದು ತಮ್ಮಲ್ಲಿ, ತಮ್ಮ ಮಕ್ಕಳಲ್ಲಿರುವ ಪ್ರದರ್ಶನ ಯೋಗ್ಯವಾದ ಪ್ರತಿಭೆಗಳನ್ನು ನಮಗೆ ತಿಳಿಸಿದಲ್ಲಿ ಸಂದರ್ಭಾನುಸಾರವಾಗಿ ಅವಕಾಶವನ್ನು ಕಲ್ಪಿಸಲು ಪ್ರಯತ್ನಿಸಲಾಗುವುದು. ತಮ್ಮೆಲ್ಲರ ಸಹಕಾರವನ್ನು ಈ ಮೂಲಕ ಕೋರುತ್ತೇವೆ. ತಮಗೆಲ್ಲರಿಗೂ ದಸರಾ ಹಬ್ಬದ ಶುಭಾಶಯಯಗಳು. ಅ

***ಸಿ.ಎಂ.ನಾಗರಾಜ***
*ಪ್ರಧಾನ ಕಾರ್ಯದರ್ಶಿ*

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ

ಅಧ್ಯಕ್ಷ
ವಸಂತ ಶೆಟ್ಟಿ ಬೆಳ್ಳಾರೆ: 9958697823

ಉಪಾಧ್ಯಕ್ಷರು
ಬಸವರಾಜು ಬಿ.ಕೆ.: 9810391608
ಆಶಾಲತಾ ಎಂ.: 9891249149

ಪ್ರಧಾನ ಕಾರ್ಯದರ್ಶಿ
ಸಿ.ಎಂ.ನಾಗರಾಜು: 9811325440

ಕೋಶಾಧಿಕಾರಿ
ಡಾ. ಅವನೀಂದ್ರನಾಥ್ ರಾವ್ 9868123382

ಜಂಟಿ ಕಾರ್ಯದರ್ಶಿಗಳು
ಎಸ್.ಸಿ. ಹೇಮಲತಾ: 9971121636
ಟಿ.ಎಂ. ಮೈಲಾರಪ್ಪ: 9868347461

ಸಮಿತಿ ಸದಸ್ಯರು
ಆಂಜನಿ ಗೌಡ: 9811165354
ರಾಧಾಕೃಷ್ಣ: 9818252183
ಪೂರ್ಣಿಮಾ ಗೌಡ: 8860916899
ವಿ.ವಿ.ಬಿರಾದಾರ: 9873005409
ಪಿ.ಸಿ.ಶ್ರೀನಿವಾಸ್: 9868170790
ಆನಂದ ಮುರಗೋಡ: 9312931233
ಆಶಾ ಶ್ಯಾಮಸುಂದರ್: 9871256177
ಬಸವರಾಜ ಮೇಟಿ: 9810282951
ಟಿ.ಪಿ. ಬೆಳ್ಳಿಯಪ್ಪ: 9654555795
ಕುಸುಮಾ ಪಿ. ನಂದರಗಿ 9868393955

ವಿಶೇಷ ಆಹ್ವಾನಿತರು
ಐ. ರಾಮ ಮೋಹನ್ ರಾವ್
ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಅರವಿಂದ ಕೌಜಲಗಿ

**DELHI KARNATAKA SANGHA**
Rao Tularam Marg, Sector-12, R K Puram, New Delhi-110022.
Phone: 011-26109615. 011-65643615 email:dksangha@gmail.com website : www.delhikarnatakasangha.com

# ದೆಹಲಿ ಕರ್ನಾಟಕ ಸಂಘದಲ್ಲಿ ತಿಂಗಳ ಕಾರ್ಯಕ್ರಮ

**ಅಕ್ಟೋಬರ್–27–ಭಾನುವಾರ**

ಸಂಜೆ : 5.00 ಗಂಟೆಗೆ


**ಮಳವಳ್ಳಿ ಮಹದೇವ ಸ್ವಾಮಿ** ಅವರಿಂದ ಜಾನಪದ ಹಾಡುಗಳು.

**ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿ**

**ಅಕ್ಟೋಬರ್–12, 13, 19 ಮತ್ತು 20**

ಕಥೂರಿಯಾ ಪಬ್ಲಿಕ್ ಸ್ಕೂಲ್ ಕ್ರೀಡಾಂಗಣ

ವಸಂತ್‌ಕುಂಜ್, ನವದೆಹಲಿ



**ಅಕ್ಟೋಬರ್ 13 ಭಾನುವಾರ**

ಸಂಜೆ 5.00 ಗಂಟೆಗೆ

ರೆಬಲ್ ಸ್ಟಾರ್ ಅಂಬರೀಶ್ ಹಾಗೂ ಸುದೀಪ್ ಅಭಿನಯದ ಚಲನಚಿತ್ರ **'ವೀರ ಪರಂಪರೆ'**

**ವಿದ್ಯಾರ್ಥಿ ವೇತನ 2013–14**

ದೆಹಲಿ ಕರ್ನಾಟಕ ಸಂಘದಿಂದ 2013–14ನೇ ಸಾಲಿಗಾಗಿ ನೀಡುವ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿಗಳನ್ನು ಕರೆಯಲಾಗಿದೆ. ಸಂಘದ ಸದಸ್ಯರು ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಅರ್ಜಿಯನ್ನು ಸಂಘದ ಕಾರ್ಯಾಲಯದಿಂದ ಪಡೆಯಬಹುದು. ಭರ್ತಿ ಮಾಡಿದ ಅರ್ಜಿಯನ್ನು 10 ನವೆಂಬರ್ 2013ರೊಳಗಾಗಿ ಸಂಘದ ಕಾರ್ಯಾಲಯಕ್ಕೆ ತಲುಪಿಸಬೇಕು. ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

*ಪ್ರಧಾನ ಕಾರ್ಯದರ್ಶಿ*

**ಜ್ಞಾನ ಮಂದಾರ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್, ಬೆಂಗಳೂರು**

2ನೇ ವಿಶ್ವ ಕನ್ನಡ ವಚನ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಮ್ಮೇಳನ 2013

ಅಧ್ಯಕ್ಷತೆ :
ಧರ್ಮದರ್ಶಿ ಶ್ರೀ ಹರಿಕೃಷ್ಣ ಪುನರೂರು

ಅಕ್ಟೋಬರ್ 19 ಮತ್ತು 20, 2013,

ಸಮಯ: ಮಧ್ಯಾಹ್ನ 2.30ರಿಂದ

ಸ್ಥಳ : ದೆಹಲಿ ಕರ್ನಾಟಕ ಸಂಘ,

ಸಾಂಸ್ಕೃತಿಕ ಕಾರ್ಯಕ್ರಮ, ವಿಶೇಷ ಉಪನ್ಯಾಸ, ಪ್ರಶಸ್ತಿ ಪ್ರದಾನ, ವಿಚಾರ ಗೋಷ್ಠಿ, ಪುಸ್ತಕ ಬಿಡುಗಡೆ

**ಆರ್ಟ್ ಗ್ಯಾಲರಿಯಲ್ಲಿ**

ಅಕ್ಟೋಬರ್ 19ರಿಂದ 26ರವರೆಗೆ ವಿ.ಟಿ. ಕರೂ ಅವರ ಚಿತ್ರಕಲಾ ಪ್ರದರ್ಶನ.

ಅಕ್ಟೋಬರ್ 27–ನವೆಂಬರ್ 2 ಚಿನ್ಮಯ್ ಬಿ.ಆರ್. ಅವರ ಚಿತ್ರಕಲಾ ಪ್ರದರ್ಶನ.


ಜಾಹೀರಾತು

ಜನಕಪುರಿ ಕನ್ನಡ ಕೂಟ

ಬೆಂಗಳೂರಿನ ಖ್ಯಾತ ಹಾಸ್ಯ ಕಲಾವಿದರಾದ
*ಶ್ರೀ ರಿಚರ್ಡ್ ಲೂಯಿಸ್*
ಹಾಗೂ ತಂಡದವರು ಪ್ರಸ್ತುತಪಡಿಸುವ

**'ನಗೆಹಬ್ಬ'**
ಕಾರ್ಯಕ್ರಮಕ್ಕೆ
ದೆಹಲಿಯ ಎಲ್ಲ ಕನ್ನಡಿಗರಿಗೂ ಹೃತ್ಪೂರ್ವಕ ಆಮಂತ್ರಣ

**ದಿನಾಂಕ 26.10.2013ರ ಶನಿವಾರ**
**ಸ್ಥಳ : ದೆಹಲಿ ಕರ್ನಾಟಕ ಸಂಘದ ಸಭಾಂಗಣ**
**ಸಮಯ : ಸಂಜೆ 5.30ಕ್ಕೆ '**

ದಯವಿಟ್ಟು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.


ಬಿ.ಕೆ. ಬಸವರಾಜು
ಅಧ್ಯಕ್ಷರು
9810391608

ಎನ್. ಪ್ರಕಾಶ್
ಕಾರ್ಯದರ್ಶಿ
9871800309

(ಕಾರ್ಯಕ್ರಮದ ನಂತರ ಊಟದ ವ್ಯವಸ್ಥೆ ಮಾಡಲಾಗಿದೆ)


**ಹಿಂದೂಸ್ತಾನಿ ಸಂಗೀತ**

ಪಂಡಿತ್ ಸೋಮನಾಥ್ ಮರಡೂರ್ ಅವರಿಂದ ಹಿಂದೂಸ್ತಾನಿ ಸಂಗೀತ ತರಗತಿಗಳು ಪ್ರತಿ ಭಾನುವಾರ ಬೆಳಿಗ್ಗೆ 11.30ರಿಂದ



**ತಬಲಾ ಕಲಿಕೆ**

ಶ್ರೀ ಸುಧೀರ್ ಫಡ್ನೀಸ್ ಅವರಿಂದ ತಬಲಾ ಕಲಿಕೆ ತರಗತಿ ಪ್ರತಿ ಭಾನುವಾರ ಬೆಳಿಗ್ಗೆ 11.30ರಿಂದ.



ಆಸಕ್ತಿಯುಳ್ಳವರು ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿ : 26109615 / 65643615 8860848584 / 8860848585

**ವೈದ್ಯಕೀಯ ಸಲಹೆಗಳು**

**ಡಾ. ನಿರಂಜನ್ ನಾಯ್ಕ್** ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ
*ಭಾನುವಾರ, 20 ಅಕ್ಟೋಬರ್ 2013ರಂದು ಸಾಯಂಕಾಲ 4 ಗಂಟೆಯಿಂದ.*



**ಡಾ. ಭೀಮ್ ಭಟ್** ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ
*ಭಾನುವಾರ, 27 ಅಕ್ಟೋಬರ್ 2013ರಂದು ಸಾಯಂಕಾಲ 4 ಗಂಟೆಯಿಂದ.*

# ಸಂಘದಿಂದ ಚಂಡೀಗಢದಲ್ಲಿ ಕಲಾ ಪ್ರದರ್ಶನ





ದೆಹಲಿ ಕರ್ನಾಟಕ ಸಂಘದ ಸದಸ್ಯರನ್ನು ಒಳಗೊಂಡ ಕಲಾವಿದರ ತಂಡವೊಂದು ಚಂಡೀಗಢದಲ್ಲಿ ಅಲ್ಲಿನ ಕನ್ನಡ ಸಂಘವು ನಡೆಸಿದ ಗಣೇಶೋತ್ಸವ ಸಮಾರಂಭದಲ್ಲಿ ಸೆಪ್ಟೆಂಬರ್ 15ರಂದು ಕಲಾ ಪ್ರದರ್ಶನವೊಂದನ್ನು ನೀಡಿದೆ.

ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀಮತಿ ಆಶಾ ಶ್ಯಾಮಸುಂದರ್ ಮತ್ತು ಶ್ರೀಮತಿ ಪೂರ್ಣಿಮಾ ಗೌಡ ಅವರ ನೇತೃತ್ವದಲ್ಲಿ ಸಂಗೀತ ಮತ್ತು ನೃತ್ಯ ಕಲಾವಿದರು ಜಾನಪದ ಗೀತೆ, ಭಕ್ತಿಗೀತೆ ಮತ್ತು ಭರತ ನಾಟ್ಯಗಳನ್ನು ಪ್ರದರ್ಶಿಸಿದರು.

ಕುಮಾರಿ ಪ್ರೇರಣಾ, ಶ್ರೀಮತಿ ಪೂಜಾ ಪ್ರದೀಪ್, ಶ್ರೀ ಅಶೋಕ್ ಕುಂಬಾರ್, ಶ್ರೀ ಮಂಜುನಾಥ್ ನಾಯಕ್, ಶ್ರೀ ಎಸ್. ಕುಮಾರ್, ಶ್ರೀಮತಿ ನೇತ್ರಾವತಿ ಕುಮಾರ್ ಮತ್ತು ಕುಮಾರಿ ಭಾಗ್ಯಶ್ರೀ ಕುಮಾರ್ ಅವರು ಜಾನಪದ ಗೀತೆ, ಭಕ್ತಿಗೀತೆಗಳನ್ನು ಪ್ರಸ್ತುತಪಡಿಸಿದರು. ಕುಮಾರಿ ಸ್ವಪ್ನಾ ಅತ್ತಾವರ್ ಅವರು ಭರತನಾಟ್ಯ ಪ್ರದರ್ಶನ ನೀಡಿದರು. ಶ್ರೀ ಆಶಿಶ್ ಶರ್ಮ (ಕೀಬೋರ್ಡ್) ಶ್ರೀ ಬಾಬಿ (ರಿದಮ್ ಪ್ಯಾಡ್) ಮತ್ತು ಶ್ರೀ ಸುರ್‌ಮಣಿ (ತಬಲ) ಸಾಥ್ ನೀಡಿದರು.

ಚಂಡೀಗಢ ಕನ್ನಡ ಸಂಘದ ಅಧ್ಯಕ್ಷ ಶ್ರೀ ಮನೋಹರ್ ಶೆಟ್ಟಿ ಅವರು ಕಲಾವಿದರ ಪ್ರದರ್ಶನವನ್ನು ಮೆಚ್ಚಿದರಲ್ಲದೇ, ಸದಸ್ಯರ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯನ್ನು ಪ್ರಶಂಸಿದರು. ಅ

*ಎಸ್. ಕುಮಾರ್*




## ಗಡಿನಾಡ ಕನ್ನಡಿಗರಿಂದ ಸಂಘಕ್ಕೆ ಭೇಟಿ

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಜಿಲ್ಲೆಯ ಗಡಿನಾಡ ಭಾಗದವರಾದ ಶ್ರೀ ಎ.ಎಚ್.ಕಾಮಟಿ ಮತ್ತು ಸ್ನೇಹಿತರು ದೆಹಲಿಗೆ ಕಾರ್ಯನಿಮಿತ್ತ ಬಂದಾಗ ಸೆಪ್ಟೆಂಬರ್ 27 ರಂದು ಸಂಘಕ್ಕೆ ಭೇಟಿ ನೀಡಿದರು. ಉಪಾಧ್ಯಕ್ಷ ಶ್ರೀ ಬಿ.ಕೆ. ಬಸವರಾಜು ಮತ್ತು ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಗಣ್ಯರನ್ನು ಬರಮಾಡಿಕೊಂಡು ಸಂಘದ ಕಾರ್ಯಚಟುವಟಿಕೆಗಳ ಬಗ್ಗೆ ತಿಳಿಸಿದರು. ಗಡಿನಾಡ ಭಾಗದಲ್ಲಿ ಕನ್ನಡ, ಸಂಸ್ಕೃತಿ, ಕಲೆ ಉಳಿಸುವುದರಲ್ಲಿ ಶ್ರೀ ಕಾಮಟಿ ಮತ್ತು ಸ್ನೇಹಿತರು ಅವಿರತ ಕೆಲಸ ಮಾಡುತ್ತಿದ್ದಾರೆ. ಅ

## ಪುರಸ್ಕಾರ ಸಂಭಾವನೆ ಸಂಘಕ್ಕೆ ದೇಣಿಗೆ

ರಾಷ್ಟ್ರಪತಿಯಿಂದ ಉತ್ತಮ ಶಿಕ್ಷಕಿ ರಾಷ್ಟ್ರಪ್ರಶಸ್ತಿಯನ್ನು ಪಡೆದ ಶ್ರೀಮತಿ ಆರ್. ಶಿವಮ್ಮ ಎಲ್.ಕೆ.ಅರಸು ಅವರು ತಮಗೆ ದೊರೆತ ಪುರಸ್ಕಾರ ಸಂಭಾವನೆಯ ಮೊತ್ತ 25000 ರೂಪಾಯಿಗಳನ್ನು ದೆಹಲಿ ಕರ್ನಾಟಕ ಸಂಘಕ್ಕೆ ದೇಣಿಗೆಯಾಗಿ ನೀಡಿದ್ದಾರೆ.

ಬೆಂಗಳೂರು ಉತ್ತರವಲಯದ ಗೆದ್ದಲಹಳ್ಳಿಯ ಸರಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಮುಖ್ಯ ಶಿಕ್ಷಕಿಯಾಗಿರುವ ಶ್ರೀಮತಿ ಶಿವಮ್ಮ ಅವರು ಹೊರನಾಡಿನಲ್ಲಿ ಕನ್ನಡ ಭಾಷೆಯನ್ನು ಉಳಿಸಿ ಬೆಳೆಸುತ್ತಿರುವ ದೆಹಲಿ ಕರ್ನಾಟಕ ಸಂಘದ ಕಾರ್ಯ ಚಟುವಟಿಕೆಗಳನ್ನು ಮೆಚ್ಚಿ ಈ ದೇಣಿಗೆಯನ್ನು ನೀಡಿದ್ದಾರೆ. ಸಂಘದಲ್ಲಿ ನಾಟಕ, ಕಲೆ, ಸಂಗೀತ ಮುಂತಾದ ಕನ್ನಡ ಸಂಸ್ಕೃತಿಯನ್ನು ಬೆಳೆಸಿ ಪೋಷಿಸುತ್ತಿರುವುದು ಸಂತೋಷವೆಂದು ಅವರು ಹೇಳಿದ್ದಾರೆ. ಅ



# ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಶಿಕ್ಷಕರಿಗೆ ಸಂಘದಲ್ಲಿ ಗೌರವಾರ್ಪಣೆ

ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಕರ್ನಾಟಕದ ಶಿಕ್ಷಕ–ಶಿಕ್ಷಕಿಯರನ್ನು ಪರಂಪರೆಯಂತೆ ದೆಹಲಿ ಕರ್ನಾಟಕ ಸಂಘದಲ್ಲಿ ಸೆಪ್ಟೆಂಬರ್ 5ರಂದು ಗೌರವಿಸಲಾಯಿತು. ಸಮಾರಂಭದ ಮುಖ್ಯ ಅತಿಥಿಗಳಾಗಿದ್ದ ರಾಜ್ಯಸಭಾ ಸದಸ್ಯ ಶ್ರೀ ಬಸವರಾಜ್ ಪಾಟೀಲ್ ಸೇಡಂ ಅವರು ಈ ಸಂದರ್ಭದಲ್ಲಿ ಮಾತಾಡುತ್ತಾ ಜ್ಞಾನಾಧಾರಿತ ಉತ್ತಮ ಬದುಕನ್ನು ರೂಪಿಸುವ, ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ಆತ್ಮಸ್ಥೈರ್ಯದಿಂದ ಎದುರಿಸುವ ಶಿಕ್ಷಣವನ್ನು ಮಕ್ಕಳಿಗೆ ಕೊಡಬೇಕಾದ ಅಗತ್ಯತೆಯನ್ನು ಒತ್ತಿ ಹೇಳಿದರು.

ಮಕ್ಕಳನ್ನು ಕೇವಲ ಸ್ಪರ್ಧೆಗೆ ಒಡ್ಡುವ ಶಿಕ್ಷಣದಿಂದಾಗಿ ಲಕ್ಷಾಂತರ ಇಂಜಿನಿಯರ್‌ಗಳು ನಿರುದ್ಯೋಗದ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಆದ್ದರಿಂದ ನಾವು ಮಕ್ಕಳನ್ನು ನೌಕರರನ್ನಾಗಿ ಮಾಡದೆ ಮಾಲೀಕರನ್ನಾಗಿ ಮಾಡಬೇಕು. ನಮ್ಮ ಜ್ಞಾನದ ಅರಿವು ಪಾಶ್ಚಾತ್ಯರಿಗಿಂತ ನೂರು ಪಟ್ಟು ಹೆಚ್ಚಿರುವುದರಿಂದ ಅವರನ್ನು ಅನುಕರಿಸುವ ಅನಗತ್ಯತೆಯನ್ನು ಶ್ರೀ ಸೇಡಂ ಅವರು ಶಿಕ್ಷಕರೊಡನೆ ಹಂಚಿಕೊಂಡರು.

ಸಂಘದ ಮಾಜಿ ಅಧ್ಯಕ್ಷರಾದ ಶ್ರೀ ಐ. ರಾಮಮೋಹನ್ ರಾವ್ ಅವರು ಮಾತನಾಡುತ್ತಾ ಮೊದಲಿಗೆ ಶಿಕ್ಷಕರು ಈ ವೃತ್ತಿಯನ್ನು ಸ್ವೀಕರಿಸಿದ್ದಕ್ಕಾಗಿ ಅವರನ್ನು ಅಭಿನಂದಿಸಿದರು. ಶ್ರೀ ರಾವ್ ಅವರು ತಮ್ಮ ಮತ್ತು ಭಾರತದ ಮಾಜಿ ರಾಷ್ಟ್ರಪತಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜತೆಗಿನ ಒಡನಾಟಗಳನ್ನು ಹಂಚಿಕೊಂಡರು ಹಾಗೂ ಶಿಕ್ಷಕರ ಮೇಲಿರುವ ಮಹತ್ತರವಾದ ಜವಾಬ್ದಾರಿಯನ್ನು ಮನದಟ್ಟು ಮಾಡಿದರು.

ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ ಅವರು ಮಾತನಾಡುತ್ತಾ ತಮ್ಮ ಸುದೀರ್ಘ ಶಿಕ್ಷಕ ವೃತ್ತಿ, ಅದರ ಪಾವಿತ್ರ್ಯತೆ, ಬದಲಾಗುತ್ತಿರುವ ಸಂದರ್ಭಕ್ಕನುಗುಣವಾಗಿ ಮಕ್ಕಳಿಗೆ ನೀಡಬೇಕಾದ ಶಿಕ್ಷಣ, ಹಾಗೂ ಒಬ್ಬ ಶಿಕ್ಷಕನಾಗಿ ಆ ವೃತ್ತಿಯಲ್ಲಿನ ಇತಿಮಿತಿಗಳನ್ನು ಪ್ರಶಸ್ತಿ ವಿಜೇತ ಶಿಕ್ಷಕರೊಂದಿಗೆ ಹಂಚಿ ಕೊಂಡರು.

ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಕೇವಲ ವೃತ್ತಿಗಾಗಿ ಮಕ್ಕಳಿಗೆ ಶಿಕ್ಷಣವನ್ನು ನೀಡದೆ, ತಮ್ಮ ತಮ್ಮ ಜೀವನವನ್ನು ರೂಪಿಸಿಕೊಳ್ಳುವ ಶಿಲ್ಪಿಗಳನ್ನಾಗಿ ಮಾಡಬೇಕು ಎಂದು ಶಿಕ್ಷಕರಲ್ಲಿ ವಿನಂತಿಸಿದರು.

ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಶಿಕ್ಷಕ, ನಾಟಕಕಾರ, ನಿರ್ದೇಶಕ, ಶ್ರೀ ಲಕ್ಷ್ಮಣ್ ಅವರು ದೆಹಲಿ ಕರ್ನಾಟಕ ಸಂಘದ ಮತ್ತು ತಮ್ಮ ನಡುವಿನ ಬಹುಕಾಲದ ನಂಟು, ಅದು ತೋರುವ ಪ್ರೀತಿ, ಆದರಗಳನ್ನು ಶ್ಲಾಘಿಸಿದರು. ಪ್ರಶಸ್ತಿ ಪುರಸ್ಕೃತ ಶಿಕ್ಷಕಿ ಶ್ರೀಮತಿ ಸರೋಜಿನಿ ಅವರು ದೆಹಲಿ ಕರ್ನಾಟಕ ಸಂಘದ ಸಾಧನೆಗಳನ್ನು ಮತ್ತು ಸಂಘವು ಶಿಕ್ಷಕರನ್ನು ಗೌರವ ನೀಡಿ ಸನ್ಮಾನಿಸಿದನ್ನು ಮೆಚ್ಚಿದರು. ಶಿಕ್ಷಕಿ ಶ್ರೀಮತಿ ಆರ್. ಶಿವಮ್ಮ ಎಲ್.ಕೆ. ಅರಸು ಅವರು ಸಂಘದ ಸಾಂಸ್ಕೃತಿಕ ಸಮುಚ್ಚಯವನ್ನು ನೋಡಿ ಅವರಿಗಾದ ಅತೀವ ಸಂತೋಷವನ್ನು ಹಂಚಿಕೊಳ್ಳುವುದರ ಜತೆಗೆ ಸಂಘಕ್ಕೆ 25,000 ರೂಪಾಯಿಗಳ ದೇಣಿಗೆ ನೀಡುವುದಾಗಿ ಘೋಷಿಸಿದರು.

ಸಂಘದ ಕೋಶಾಧಿಕಾರಿ ಡಾ. ವೈ. ಅವನೀಂದ್ರನಾಥ್ ರಾವ್ ಅವರು ಕಾರ್ಯಕ್ರಮವನ್ನು ನಿರ್ವಹಿಸಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ವಂದಿಸಿದರು. ಅ

*ಪಿ.ಸಿ. ಶ್ರೀನಿವಾಸ್*





## ಸಂಘದಲ್ಲಿ ಗಣೇಶ ಸಾಂಸ್ಕೃತಿಕ ಹಬ್ಬ

# ಗಾಯನ ಮತ್ತು ನಾಟ್ಯ ಕಾರ್ಯಕ್ರಮ

ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ಗಣೇಶ ಸಾಂಸ್ಕೃತಿಕ ಹಬ್ಬದ ಪ್ರಯುಕ್ತ ಖ್ಯಾತ ಗಾಯಕ ಭೀಮ್‌ಸೇನ್ ಭಜಂತ್ರಿ ಅವರಿಂದ ಭಕ್ತಿಸಂಗೀತ ಸುಧೆ ಮತ್ತು ಕಲಾವಿದೆ ಶಾರದಾ ವೆಂಕಟ್ ಅವರಿಂದ ಭರತ ನಾಟ್ಯ ಪ್ರದರ್ಶನ ಕಾರ್ಯಕ್ರಮ ಸೆಪ್ಟೆಂಬರ್ 9ರಂದು ನಡೆಯಿತು.

ಭೀಮ್‌ಸೇನ್ ಭಜಂತ್ರಿ ಅವರ ಜತೆ ಸಹ ಗಾಯನದಲ್ಲಿ ಅವರ ಪುತ್ರಿ ಶ್ರುತಿ ಭಜಂತ್ರಿ ಅವರು ಸಹಕರಿಸಿದರು. ಸಿಂಧೂರ ವದನೆ, ಗಜಮುಖನೇ ಸಿದ್ದಿವಿನಾಯಕನೇ ಗಣೇಶ ಸ್ತುತಿಗಳ ನಂತರ ದಾಸವಾಣಿ, ಅಲ್ಲಮ ಪ್ರಭು ಮತ್ತು ಅಕ್ಕ ಮಹಾದೇವಿ ವಚನಗಳನ್ನು ಹಾಡಿದ ಭಜಂತ್ರಿ ಅವರು ಸೂಫಿ ಗಾನವೊಂದನ್ನು ಕೂಡ ಹಾಡಿದರು. ಸುಧೀರ್ ಫಡ್ನಿಸ್ ಅವರು ತಾಳ, ತಾನ್‌ಸೇನ್ ಅವರು ತಬಲಾ ಹಾಗೂ ಕಿರಣ್ ಕುಮಾರ್ ಅವರು ಕೊಳಲು ಸಾಥಿ ನೀಡಿದರು.

ಶಾರದಾ ವೆಂಕಟ್ ಅವರು ಆದಿ ಶಂಕರಾಚಾರ್ಯರ ಪಂಚರತ್ನ, ಪುರಂದರ ದಾಸರ ಜಗದೋದ್ಧಾರನ, ಕಲಾಕ್ಷೇತ್ರ ವರ್ಣಮ್ ಮುಂತಾದ ಹಾಡುಗಳಿಗೆ ಭರತ ನಾಟ್ಯ ಪ್ರದರ್ಶನ ನೀಡಿದರು. ಸಂಗೀತ ಮತ್ತು ನಟ್ಟುವಾಂಗಂನಲ್ಲಿ ಗುರು ವಿ. ಕೃಷ್ಣ ಮೂರ್ತಿ, ಮೃದಂಗಂನಲ್ಲಿ ತಂಜಾವೂರ್ ಆರ್. ಕೇಶವನ್, ಕೊಳಲು ಜತೆ ರಜತ್ ಪ್ರಸನ್ನ ಸಹಕರಿಸಿದರು. ಕಲಾವಿದೆಯ ಅಲಂಕಾರವನ್ನು ಬ್ರಿಜ್ ಮೋಹನ್ ಅವರು ಮಾಡಿದರು.

ಆರಂಭದಲ್ಲಿ ಚಿತ್ರ ಕಲಾವಿದ ಸುಧೀರ್ ಫಡ್ನಿಸ್ ಅವರು ನಿರ್ಮಿಸಿದ ಮಂಟಪದಲ್ಲಿ ಅಲಂಕಾರಗೊಂಡ ಗಣೇಶನ ಮೂರ್ತಿಯನ್ನು ಸ್ಥಾಪಿಸಿ ಸಂಘದ ಉಪಾಧ್ಯಕ್ಷರಾದ ಶ್ರೀ ಬಿ.ಕೆ. ಬಸವರಾಜು ಅವರು ತಮ್ಮ ಧರ್ಮಪತ್ನಿಯೊಂದಿಗೆ ಪೂಜೆಯನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಕಾರ್ಯಕಾರೀ ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರು ಹಾಗೂ ದೆಹಲಿ ಗಣೇಶ ಮಿತ್ರ ಮಂಡಳಿಯ ಅಧ್ಯಕ್ಷರಾದ ಶ್ರೀ ಉಸ್ಮಾನ್ ಅಬ್ದುಲ್ ಶರೀಫ್ ಅವರು ಉಪಸ್ಥಿತರಿದ್ದರು. ಸಾಂಸ್ಕೃತಿಕ ಕಾರ್ಯಕ್ರಮಗಳ ಕಲಾವಿದರ ಸಂಭಾವನೆ ಮತ್ತು ಉತ್ಸವಕ್ಕಾಗಿ ಗಣೇಶ ಮಿತ್ರ ಮಂಡಳಿಯು 35,000 ರೂಪಾಯಿ ದೇಣಿಗೆ ನೀಡಿತು. ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಆಶಾ ಶ್ಯಾಮ್ ಸುಂದರ್ ಅವರು ಗಣೇಶೋತ್ಸವದ ಸಂಚಾಲನಾ ಕಾರ್ಯದ ಜವಾಬ್ದಾರಿಯನ್ನು ವಹಿಸಿದ್ದರು.

ಕಲಾಸಕ್ತರನ್ನು ಉದ್ದೇಶಿಸಿ ಮಾತಾಡಿದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಕಳೆದ ಎರಡು ದಶಕಗಳಿಂದ ಸಂಘದ ಪರಿಸರದಲ್ಲಿ ಗಣೇಶ ಹಬ್ಬವನ್ನು ಆಚರಿಸುವಲ್ಲಿ ಶ್ರೀ ಶರೀಫ್ ಅವರು ಸದಾ ಸಹಕರಿಸಿರುವರು ಎಂದರು. ಶ್ರೀ ಶರೀಫ್ ಅವರ ಸಾಂಸ್ಕೃತಿಕ ಆಸಕ್ತಿ, ಸಾಮಾಜಿಕ ಕಾಳಜಿ ಹಾಗೂ ಧಾರ್ಮಿಕ ಸಾಮರಸ್ಯದ ಭಾವನೆಗಳು ಅನುಕರಣೀಯವಾಗಿವೆ ಎಂದು ಶ್ರೀ ಬೆಳ್ಳಾರೆ ಅವರು ಹೇಳಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಎಲ್ಲರಿಗೂ ಧನ್ಯವಾದ ಅರ್ಪಿಸಿದರು. ಅ

*ಅಭಿಮತ ವರದಿ*








# ಸಾಹಿತ್ಯ ವೈವಿಧ್ಯ ಕಾರ್ಯಕ್ರಮ


ಡಾ. ಪುರುಷೋತ್ತಮ ಬಿಳಿಮಲೆ


ವಸಂತ ಶೆಟ್ಟಿ ಬೆಳ್ಳಾರೆ


ಡಾ.ಅಹಲ್ಯಾ ಚಿಂತಾಮಣಿ


ಡಾ. ವೈ. ಅವನೀಂದ್ರನಾಥ್ ರಾವ್


ಪೂರ್ಣಿಮಾ ಗೌಡ

ಜಾನಪದ ಕತೆ, ಕವನ ವಾಚನ, ಸಾಹಿತ್ಯ ಕುರಿತು ಸಂವಾದಗಳಿಂದ ಕೂಡಿದ ಸಾಹಿತ್ಯ ವೈವಿಧ್ಯ ಕಾರ್ಯಕ್ರಮವು ದೆಹಲಿ ಕರ್ನಾಟಕ ಸಂಘದ ಆಶ್ರಯದಲ್ಲಿ ಸೆಪ್ಟಂಬರ್ 22ರಂದು ನಡೆಯಿತು.

ಜಾನಪದ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ ಅವರು ಹಿಂದಿ ಜನಪದ ಕತೆಯನ್ನು ಹೇಳಿದರು. ಆ ಕತೆಯು ಭಾರತದ ವೈವಿಧ್ಯತೆಯನ್ನು ಹೇಗೆ ಸಂಕೇತಿಸುತ್ತದೆ ಎಂದು ಹೇಳಿ ಮಹಾಭಾರತದ ಬಹುರೂಪದ ಬಗ್ಗೆ ಬೆಳಕು ಚೆಲ್ಲಿದರು. ಶ್ರೀ ಎಸ್. ಶ್ರೀನಿವಾಸ್ ಅವರು ತಮಿಳಿನ ತಿರುಮಂದಿರಂ ಅವರ ಅನುವಾದಿತ ಕನ್ನಡದ ಕವಿತೆಗಳನ್ನು ವಾಚನ ಮಾಡುತ್ತಾ ತಿರುಮಂದಿರಂ ಅವರ ಕವಿತೆಗಳಲ್ಲಿ ಕನ್ನಡದ ವಚನಗಳ ಸಾರವಿರುವುದನ್ನು ಕಾವ್ಯಾಸಕ್ತರ ಗಮನಕ್ಕೆ ತಂದರು. ಡಾ.ಅಹಲ್ಯಾ ಚಿಂತಾಮಣಿಯವರು ಹಳೆಗನ್ನಡದ ವಿಶಿಷ್ಟತೆಗಳನ್ನು ವಿವರಿಸುವ ಲೇಖನವನ್ನು ಓದಿ ಅದರ ವಿವರವನ್ನು ಸಾಹಿತ್ಯಾಸಕ್ತರಿಗೆ ವಿವರಿಸಿದರು. ಅವರು ಸ್ವರಚಿತ ಕವನವನ್ನು ವಾಚನ ಮಾಡಿದರು.

ಡಾ. ವೈ. ಅವನೀಂದ್ರನಾಥ್ ರಾವ್ ಅವರು ಕವಿಗುರು ರವೀಂದ್ರನಾಥ್ ಟ್ಯಾಗೋರ್ ಅವರ ವ್ಯಕ್ತಿತ್ವ ಹಾಗೂ ಬರಹದ ಮೇಲೆ ಬೆಳಕನ್ನು ಚೆಲ್ಲಿದರು. ಶ್ರೀಮತಿ ಪೂರ್ಣಿಮಾ ಗೌಡ ಅವರು ಇಂಗ್ಲಿಷ್ ಕವಿ ಡಿ.ಎಚ್.ಲಾರೆನ್ಸ್ ಅವರ ಕವಿತೆಯನ್ನು ಓದಿದರು. ಶ್ರೀ ಶಶಿಧರ ಮನವಳ್ಳಿ, ಶ್ರೀ ನರಸಿಂಹ ಮೂರ್ತಿ, ಶ್ರೀ ಅಶೋಕ್ ಕುಮಾರ್ ಮತ್ತು ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಸ್ವರಚಿತ ಕವನಗಳನ್ನು ಓದಿದರು. ಶ್ರೀ ಶಬ್ಬೀರ್ ಮತ್ತು ಕುಮಾರಿ ರಶ್ಮಿ ಭಾವಗೀತೆಗಳನ್ನು ಹಾಡಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮವನ್ನು ಶ್ರೀ ಪಿ.ಸಿ. ಶ್ರೀನಿವಾಸ್ ಅವರು ನಿರ್ವಹಿಸಿದರು. ದೆಹಲಿಯ ಕನ್ನಡ ಸಾಹಿತ್ಯಾಸಕ್ತರು ಸುಂದರ ಸಂಜೆಯನ್ನು ತಮ್ಮದಾಗಿಸಿದರು. ಅ

*ಪಿ.ಸಿ. ಶ್ರೀನಿವಾಸ್*


ಶಶಿಧರ ಮನವಳ್ಳಿ


ನರಸಿಂಹ ಮೂರ್ತಿ


ಅಶೋಕ್ ಕುಮಾರ್


ಎಸ್. ಶ್ರೀನಿವಾಸ್


ರಶ್ಮಿ


ಶಬ್ಬೀರ್

# ಬಿ.ಎಸ್.ಮಠ ಮತ್ತು ಅಕ್ಕಮಹಾದೇವಿ ಮಠ ಅವರಿಂದ ವಯಲಿನ್ ವಾದನ








ಧಾರವಾಡದ ಪಂಡಿತ ಬಿ.ಎಸ್.ಮಠ ಮತ್ತು ವಿದೂಷಿ ಅಕ್ಕಮಹಾದೇವಿ ಮಠ ಅವರ ವಯಲಿನ ವಾದನ ಕಾರ್ಯಕ್ರಮವು ದೆಹಲಿ ಕರ್ನಾಟಕ ಸಂಘದಲ್ಲಿ ಸೆಪ್ಟಂಬರ್ 29ರಂದು ನಡೆಯಿತು. ರವಿಕಿರಣ್ ನಾಕೋಡ್ ಅವರು ತಬಲಾದಲ್ಲಿ ಸಾಥ್ ನೀಡಿದ್ದರು.

ಆರಂಭದಲ್ಲಿ ಕುಮಾರಿಯರಾದ ಅಮಿತದೇವ್ ಮತ್ತು ಅಂಕಿತದೇವ್ ಅವರು ನೃತ್ಯ ರೂಪಕ, ಭಾಗ್ಯಶ್ರೀ ಮತ್ತು ಜಯಶ್ರೀ ಅವರ ಗಾಯನ ಮತ್ತು ಕುಮಾರಿ ರಮ್ಯಾ ಎಂ.ಎಸ್. ಅವರಿಂದ ಗಣೇಶನ ಭಕ್ತಿಗೀತೆಗೆ ನೃತ್ಯ ನಡೆಯಿತು.

ಹಿರಿಯ ನ್ಯಾಯವಾದಿ ಶ್ರೀ ಶರತ್ ಎಸ್. ಜವಳಿ ಅವರು ಕಲಾವಿದರಿಗೆ ಸಂಘದ ಸ್ಮರಣಿಕೆ ನೀಡಿ ಅಭಿನಂದಿಸಿದರು. ಜಂಟಿ ಕಾರ್ಯದರ್ಶಿ ಶ್ರೀ ಟಿ.ಎಂ. ಮೈಲಾರಪ್ಪ ಅವರು ಕಾರ್ಯಕ್ರಮ ನಿರ್ವಹಿಸಿದರು. ಅ



# ಸಂಘದಲ್ಲಿ ಆರ್ಟ್







ಭಾವನೆಗಳು ಕುಂಚದ ಮೂಲಕ ಕಲೆಯಾಗಿ ಪರಿವರ್ತನೆಗೊಂಡಾಗ ಅದರಲ್ಲಿ ವಿವಿಧ ರೀತಿಯ ಸೃಜನಾತ್ಮಕ ಚಿಂತನೆಗಳು ರೂಪುಗೊಳ್ಳುತ್ತವೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ಶ್ರೀ ಅಸ್ಕರ್ ಫೆರ್ನಾಂಡಿಸ್ ಅವರು ಹೇಳಿದರು.

ಅವರು ದೆಹಲಿ ಕರ್ನಾಟಕ ಸಂಘದಲ್ಲಿ ನೂತನವಾಗಿ ನಿರ್ಮಿಸಿದ ಆರ್ಟ್ ಗ್ಯಾಲರಿಯನ್ನು ಸೆಪ್ಟೆಂಬರ್ 18ರಂದು ಉದ್ಘಾಟಿಸಿ ಮಾತಾಡುತ್ತಿದ್ದರು. ಸಾಮಾಜಿಕ ಸಮಸ್ಯೆಗಳು, ವೈಯಕ್ತಿಕ ಸ್ಪಂದನೆಗಳು ಮತ್ತು ಘಟನೆಗಳು ಕಲಾವಿದರು ರಚಿಸುವ ಕಲೆಗಳಾಗಿ ಪರಿವರ್ತನೆಗಳಾಗುತ್ತವೆ. ಕಲಾವಿದರು ಕುಂಚದಿಂದ ತಮ್ಮ ಅಂತರ್ಯದ ಭಾವನೆಗಳನ್ನು ವ್ಯಕ್ತಪಡಿಸುತ್ತಾರೆ, ಎಂದು ಅವರು ಹೇಳಿದರು.

ಕರ್ನಾಟಕದ ನೃತ್ಯ, ಸಂಗೀತ, ಯಕ್ಷಗಾನಗಳನ್ನು ಪ್ರೋತ್ಸಾಹಿಸುವುದರಿಂದ ಈ ಕಲಾಪರಂಪರೆಗಳು ನಮ್ಮ ಮುಂದಿನ ತಲೆಮಾರಿನ ವರೆಗೆ ತಲುಪಿಸಲು ಸುಲಭ ಸಾಧ್ಯ ಎಂದು ಶ್ರೀ ಆಸ್ಕರ್ ಅವರು ಹೇಳಿದರು. ನಮ್ಮ ನಾಡಿನ ಹಿರಿಮೆಯನ್ನು ದೇಶದ ರಾಜಧಾನಿಯಲ್ಲಿ ಪ್ರತಿಬಿಂಬಿಸುವುದರಿಂದ ನಮ್ಮ ದೇಶದ ಪರಂಪರೆಯನ್ನು ಜಾಗತಿಕ ಮಟ್ಟದಲ್ಲಿ ತೋರಿಸಬಹುದು ಎಂದು ಅವರು ವಿವರಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ ಅವರು ಮಾತಾಡುತ್ತಾ ಬಹಳಷ್ಟು ವರ್ಷಗಳ ಪ್ರಯತ್ನದಿಂದ ದೆಹಲಿ ಕರ್ನಾಟಕ ಸಂಘದಲ್ಲಿ ಸುಸಜ್ಜಿತವಾದ ಆರ್ಟ್ ಗ್ಯಾಲರಿಯನ್ನು ಕಲಾವಿದರಿಗಾಗಿ ನೀಡಿದ ಸಂಘದ ಆಡಳಿತ ಮಂಡಳಿಯನ್ನು ಅಭಿನಂದಿಸಿದರು. ಇದೇ ರೀತಿ ಸಂಘದ ಗ್ರಂಥಾಲಯವನ್ನೂ ಇನ್ನಷ್ಟು ಸುಸಜ್ಜಿತವಾಗಿ ವ್ಯವಸ್ಥೆಗೊಳಿಸಬೇಕು ಎಂದು ಅವರು ನುಡಿದರು. ಭಾಷೆ ಮತ್ತು ಭಾವನೆಗಳ ಹೊಸ ಸೃಷ್ಟಿಗೆ ಸಂಘವು ಮಹತ್ತರ ಪಾತ್ರವಹಿಸಬೇಕು ಎಂದು ಅವರು ಹೇಳಿದರು.

ಮುಖ್ಯ ಅತಿಥಿಯಾಗಿ ಸಮಾರಂಭದಲ್ಲಿ ಭಾಗವಹಿಸಿದ ಖ್ಯಾತ ಸಾಹಿತಿ, ವಿದ್ವಾಂಸ ಡಾ. ಹಂಪ ನಾಗರಾಜಯ್ಯ ಅವರು ಮಾತಾಡುತ್ತಾ ಆರ್ಟ್ ಗ್ಯಾಲರಿಯು ಕರ್ನಾಟಕದ ಕಲಾವಿದರಿಗೆ ದೇಶದ ರಾಜಧಾನಿಯಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸಲು ದೊರೆತ ಅವಕಾಶವಾಗಿದೆ ಎಂದರು. ಸಂಘದ ಕಾರ್ಯಕ್ಷೇತ್ರವು ವಿಸ್ತಾರ ಗೊಂಡಿತ್ತಲ್ಲದೇ ಕರ್ನಾಟಕದ ಘನತೆಯೂ ಹೆಚ್ಚಿದೆ ಎಂದು ಅವರು ಹೇಳಿದರು.

ಆರ್ಟ್ ಗ್ಯಾಲರಿಯು ಡಾ. ಪುರುಷೋತ್ತಮ ಬಿಳಿಮಲೆಯವರು ಸಂಘದ ಅಧ್ಯಕ್ಷರಾಗಿದ್ದಾಗ ಕಂಡ ಕನಸು. ಅದರ ನಂತರದ ಕಾರ್ಯಕಾರಿ ಸಮಿತಿಗಳು ಕೂಡ ಬಹಳಷ್ಟು ಪ್ರಯತ್ನ ಮಾಡಿ ಈ ಹಿಂದಿನ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಕೂಡ ಗ್ಯಾಲರಿಯ ನಿರ್ಮಾಣಕ್ಕೆ ಕೊಡುಗೆ ನೀಡಿದ್ದಾರೆ ಎಂದು ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಈ ಸಂದರ್ಭದಲ್ಲಿ ಹೇಳಿದರು. ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು

# ಗ್ಯಾಲರಿಯ ಉದ್ಘಾಟನೆ





ಗಳಿಸಿದ ಕಲಾವಿದರು ಈ ಗ್ಯಾಲರಿಯಲ್ಲಿ ತಮ್ಮ ಕಲಾಪ್ರದರ್ಶನಗಳನ್ನು ಮಾಡಿ ಇದನ್ನೊಂದು ಹಾರ್ಟ್ ಗ್ಯಾಲರಿಯನ್ನಾಗಿ ಮಾಡಬೇಕು ಎಂದು ಶ್ರೀ ಬೆಳ್ಳಾರೆ ಅವರು ನುಡಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ವಂದಿಸಿದರು.

ಈ ಸಂದರ್ಭದಲ್ಲಿ ಕಲಾವಿದರಾದ ಅರುಣ್ ಕುಮಾರ್ ಎಚ್.ಜಿ. ಮತ್ತು ಕೆ.ಆರ್. ಸುಬ್ಬಣ್ಣ ಅವರು ಮಾತಾಡಿದರು. ಆರಂಭದಲ್ಲಿ ಕ್ಯಾನ್ವಾಸ್‌ನಲ್ಲಿ ಕುಂಚದಿಂದ ಬಣ್ಣವನ್ನು ಬಳಸಿ ಚಿತ್ರ ರಚಿಸುವ ಮೂಲಕ ಆರ್ಟ್ ಗ್ಯಾಲರಿಯನ್ನು ಶ್ರೀ ಆಸ್ಕರ್ ಫೆರ್ನಾಂಡಿಸ್ ಅವರು ಉದ್ಘಾಟಿಸಿದರು. ಎರಡು ವಾರ ಸುಮಾರು ಇಪ್ಪತ್ತು ಕಲಾವಿದರ ಕಲಾಕೃತಿಗಳ ಪ್ರದರ್ಶನ ನಡೆಯಿತು. ದೆಹಲಿಯ ಕನ್ನಡದ ಹೆಸರಾಂತ ಚಿತ್ರಕಲಾವಿದರಾದ ಈರಣ್ಣ ಜಿ.ಆರ್., ಅರುಣ್ ಕುಮಾರ್ ಎಚ್.ಜಿ, ಮಂಜುನಾಥ್ ಕಾಮತ್, ಅನು ನಾಯಕ್, ದೀಪಕ್ ಗುಡ್ಡದಕೇರಿ, ಸಿದ್ಧಾರ್ಥ ಪಿ.ಬೆಟ್ಟಜೇವರ್ಗಿ, ಗೀತಾ ರಾಮಶೇಷ್, ಸಫಲ್ ಮಾಣೆಕಾಪುರೆ, ಶ್ರೀಕಾಂತ್ ಪೋದ್ದಾರ್, ಜ್ಯೋತಿ ಪೊದ್ದಾರ್, ಭೀಮರಾವ್ ಮುರಗೋಡ, ಶಾಲನ್ ಮುರಗೋಡ, ಕೆ.ಆರ್.ಸುಬ್ಬಣ್ಣ, ಅಪೂರ್ವ ಸುಬ್ಬಣ್ಣ, ವಿಲಾಸ್ ಕುಲಕರ್ಣಿ, ಅನಿತಾ ಕುಲಕರ್ಣಿ, ಸುಧೀರ್ ಫಡ್ನೀಸ್, ಚೆನ್ನು ಎಸ್. ಮಠದ, ಕುಲಕರ್ಣಿ ಎಂ.ಎಸ್ ಅವರಿಂದ ಚಿತ್ರಕಲಾ ಪ್ರದರ್ಶನ ನಡೆಯಿತು. ಅ

***ಅಭಿಮತ ವರದಿ***

ಸಂಘದ ಸಾಂಸ್ಕೃತಿಕ ಸಮುಚ್ಚಯ

# ಧನ ಸಂಗ್ರಹದ ಕೆಲವು ನೆನಪುಗಳು



**ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯದ ನಿರ್ಮಾಣಕ್ಕಾಗಿ ಮಾಡಿದ ಬೃಹತ್ ಸಾಲ ಮರು ಪಾವತಿಯಾಗಿ ಸಂಘ ಋಣಮುಕ್ತವಾದ ಸಂದರ್ಭದಲ್ಲಿ ಸಮುಚ್ಚಯದ ನಿರ್ಮಾಣಕ್ಕಾಗಿ ಧನ ಸಂಗ್ರಹ ಮಾಡಿದ ನೆನಪುಗಳನ್ನು ಸಂಘದ ಮಾಜಿ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಅವರು ಅಭಿಮತದ ಓದುಗರೊಂದಿಗೆ ಆತ್ಮೀಯವಾಗಿ, ಭಾವನಾತ್ಮಕವಾಗಿ ಹಂಚಿಕೊಂಡಿದ್ದಾರೆ.**

ಮನಸ್ಸು ಬೇಡವೆಂದರೂ ಒಂದೇ ಸವನೆ ಅನೇಕ ವರ್ಷಗಳ ಹಿಂದೆ ಓಡುತ್ತಿದೆ. ಹೃದಯವು ವೈಚಾರಿಕತೆಯಿಂದ ದೂರ ಸರಿದು ಭಾವುಕವಾಗುತ್ತದೆ. ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯ ಮೇಲೇಳುತ್ತಿದ್ದ ಕಾಲವದು.

2004ರ ಡಿಸೆಂಬರ್ ತಿಂಗಳಿನ ಅತೀವ ಚಳಿಯ ದಿನಗಳವು. ಅದೊಂದು ರವಿವಾರ. ದೆಹಲಿಯ ಹಳೆಯ ವಿಮಾನ ನಿಲ್ದಾಣದಲ್ಲಿ ಯಾರಿಗೋ ಕಾಯುತ್ತಿದ್ದೆ. ರಾತ್ರಿ 12 ಗಂಟೆಯ ಸಮಯ. ವಿಮಾನದ ಆಗಮನ ಮತ್ತೆ ನಾಲ್ಕು ಗಂಟೆ ತಡವಾಗುತ್ತದೆ ಎಂಬ ಘೋಷಣೆ ಕೇಳಿಸಿತು. ಆ ಚಳಿಯಲ್ಲಿ ವಿಮಾನ ನಿಲ್ದಾಣದಲ್ಲಿ ಮತ್ತೆ ನಾಲ್ಕು ಗಂಟೆಗಳನ್ನು ಕಳೆಯುವುದು ಕಷ್ಟವೆಂದು ಮನಸಿಗೆ ಅನಿಸತೊಡಗಿತು.

ದೆಹಲಿ ಕರ್ನಾಟಕ ಸಂಘದಲ್ಲಿ ಕೆಲಸ ನಡೆಯುತ್ತಿದೆ, ಕಟ್ಟಡದ ಸಾಮಾನುಗಳೆಲ್ಲ ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ, ಕಾವಲುಗಾರರೇನೋ ಇದ್ದರು! ಆದರೆ ಅವರೆಲ್ಲ ಏನು ಮಾಡುತ್ತಿದ್ದಾರೆ? ಎಂಬ ಆತಂಕ ನಡುರಾತ್ರಿಯಲ್ಲಿ ಶುರುವಾಯಿತು. ನನ್ನ ಕಾರು ಸಂಘದತ್ತ  ತಿರುಗಿತು. ಸಂಘದ ಆವರಣ ತಲುಪಿದಾಗ ಸ್ಮಶಾನ ಮೌನ. ಸ್ವಲ್ಪ ಸಂಕೋಚವೂ ಆಯಿತು. ಇರಲಿ ಎಂದು ಬೇಸ್‌ಮೆಂಟಿನ ಕಡೆಗೆ ನಡೆದೆ. ಅಲ್ಲಿ ನಮ್ಮ ಹಳೆ ಕಚೇರಿಯಿತ್ತು.

ಆಚೀಚೆ ನೀರು ಸೋರುತ್ತಿದ್ದು ಚಳಿ ಇಮ್ಮಡಿಯಾಗಿದ್ದರೂ, ಅಲ್ಲಿ ಸುಮ್ಮನೆ ಸ್ವಲ್ಪ ಹೊತ್ತು ಕುಳಿತು ಹೋದರಾಯಿತು ಅಂತ ನನ್ನ ಯೋಚನೆ. ನಿಧಾನವಾಗಿ ಕಚೇರಿ ಕಡೆ ಹೆಜ್ಜೆ ಹಾಕಿದರೆ ಅಲ್ಲಿ ಯಾರೋ ಇಡೀ ಮುಖಕ್ಕೆ ಮುಸುಕು ಹಾಕಿ, ಕಣ್ಣು ಮಾತ್ರ ಹೊರಗೆ ಕಾಣುವಂತೆ ಮಾಡಿ ಮಿಸುಕಾಡದೆ ಕುಳಿತಿದ್ದರು. ನನಗೆ ಕುತೂಹಲವೂ, ಭಯವೂ ಏಕ ಕಾಲಕ್ಕೆ ಉಂಟಾಯಿತು. ಮೆಲ್ಲನೆ ನಡೆದು ನೋಡಿದರೆ, ಮಿಸುಕಾಡದ ಜೀವ ಎದ್ದು ನಿಂತು ಗೌರವ ಸೂಚಿಸಿತು.

ಅವರು ಸರವು ಕೃಷ್ಣ ಭಟ್ಟರಾಗಿದ್ದರು. ವಿಸ್ಮಯಗೊಂಡ ನಾನು 'ಏನು ಭಟ್ರೇ? ರಾತ್ರಿ ಎರಡು ಗಂಟೆಗೆ, ಅದೂ ಈ ಚಳಿಯಲ್ಲಿ ಇಲ್ಲಿ' ಎಂದು ಕೇಳಿದೆ. ಭಟ್ಟರು ಅಂದರು 'ನಾಳೆ ಕರ್ಣಾಟಕ ಬ್ಯಾಂಕಿಗೆ ಸಾಲದ ಅರ್ಜಿ ಸಲ್ಲಿಸಲೇ ಬೇಕು, ರಾಮಮೋಹನ ರಾವ್ ಅವರು –ತಡಮಾಡಬೇಡಿ, ನಾಡಿದ್ದು ಬ್ಯಾಂಕಿನ ನಿರ್ದೇಶಕರ ಮೀಟಿಂಗ್ ಇದೆ– ಎಂದಿದ್ದಾರೆ. ಯೋಜನೆ ಸಿದ್ಧಪಡಿಸುತ್ತಿದ್ದೇನೆ, ಹೇಗೆ ಮಾಡಿದರೂ ಮೂರು ಕೋಟಿ ಸಾಲ ಪಡೆಯಲು ಬೇಕಾದಷ್ಟು ಆದಾಯವನ್ನು ತೋರಿಸಲಾಗುತ್ತಿಲ್ಲ' ಎಂದು ಖಿನ್ನರಾದರು. ಈ ವಿಷಯದಲ್ಲಿ ನನ್ನಲ್ಲಿ ಹೆಚ್ಚು ಸಲಹೆಗಳಿರಲಿಲ್ಲ. ಸುಮಾರು ಹೊತ್ತು ಅಕ್ಕ ಪಕ್ಕ ಕುಳಿತಿದ್ದೆವು. ಮರುದಿನ ಭಟ್ಟರು ಯೋಜನೆಯನ್ನು ಕರ್ಣಾಟಕ ಬ್ಯಾಂಕಿಗೆ ಸಲ್ಲಿಸಿದರು. ರಾಮಮೋಹನ ರಾವ್ ಅವರ ಮಾರ್ಗದರ್ಶನದಲ್ಲಿ ಸಾಲವೂ ದೊರೆಯಿತು. ಕಟ್ಟಡ ಮೇಲೆ ಬಂದು, ಬ್ಯಾಂಕಿನ ಸಾಲ ಮುಗಿದದ್ದು ಈಗ ಇತಿಹಾಸ. ಈಗಲೂ ಕೃಷ್ಣ ಭಟ್ಟರನ್ನು ನೋಡುವಾಗ ಮಧ್ಯರಾತ್ರಿಯ ಆ ದಿನ ನೆನಪಾಗುತ್ತದೆ.

***

ಕೆ. ಆರ್. ನಾಗರಾಜರು ಕಟ್ಟಡ ನಿರ್ಮಾಣಕ್ಕೆ ಬೇಕಾದ ನೀಲಿ ನಕ್ಷೆಯನ್ನು ಸಿದ್ಧಪಡಿಸಿದ್ದಲ್ಲದೆ, ಅಪಾರ ಶ್ರಮವಹಿಸಿ, ಅದರ ಆರಂಭಿಕ ವಿಘ್ನಗಳನ್ನೆಲ್ಲ ನಿವಾರಿಸಿದ್ದರು. ಜೊತೆಗೆ ಕರ್ನಾಟಕ ಸರಕಾರಕ್ಕೆ ಎರಡು ಕೋಟಿ ರೂಪಾಯಿಗಳ ಪ್ರಸ್ತಾವ ಸಲ್ಲಿಸಿ, ಅದರಲ್ಲಿ ಒಂದು ಕೋಟಿ ರೂಪಾಯಿಗೆ ಸರಕಾರದ ಮಂಜೂರಾತಿ ಪಡೆದು, ಮತ್ತೆ ಅದರಲ್ಲಿ ಐವತ್ತು ಲಕ್ಷ ರೂಪಾಯಿಗಳನ್ನು ತಂದು ತನ್ನ ಅಪೂರ್ವ ಕಾರ್ಯಕ್ಷಮತೆಯನ್ನು ಮೆರೆದಿದ್ದರು.

ಆದರೆ ಈ ನಡುವೆ ಕೆಲವು ಘಟನೆಗಳು ನಡೆದು ಮುಂದಿನ ಐವತ್ತು ಲಕ್ಷ ರೂಪಾಯಿಗಳ ಕಡತ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಮುಚ್ಚಿ ಹೋಯಿತು. ನಾನು ಎಲ್ಲಿ ವಿಚಾರಿಸಿದರೂ ಏನೂ ಉತ್ತರ ದೊರೆಯುತ್ತಿರಲಿಲ್ಲ. ಆಗ ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಯಾಗಿದ್ದ ಉಷಾ ಗಣೇಶ್ ಅವರ ಕಚೇರಿಯಲ್ಲಿ ಧೂಳು ತಿನ್ನುತ್ತಿದ್ದ ಕಡತವನ್ನು ಹೊರತರಲು ನೆರವಾದವರು ಗೆಳೆಯ ಆರ್. ಭರತಾದ್ರಿಯವರು.

ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ಜೆ.ಎಚ್. ಪಟೇಲರಿಗೆ ಪತ್ರಿಕಾ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದ ಭರತಾದ್ರಿ ಅವರಿಗೆ ವಿಧಾನ ಸೌಧದ ಒಳ ಹೊರಗೆಲ್ಲಾ ಚೆನ್ನಾಗಿ ಗೊತ್ತಿತ್ತು. ಅವರು ಆಗಿನ ಮುಖ್ಯಮಂತ್ರಿಯಾಗಿದ್ದ ಧರ್ಮ ಸಿಂಗ್ ಅವರ ಕಾರ್ಯದರ್ಶಿಯಾಗಿದ್ದ ಸಿದ್ದಯ್ಯ ಅವರ ಮೂಲಕ ಧೂಳು ಹಿಡಿದು, ನೋಟದಿಂದಲೇ ಮರೆಯಾಗಿದ್ದ ಕಡತವನ್ನು ಪತ್ತೆ ಹಚ್ಚಿಸಿದರು. ಮಾತ್ರವಲ್ಲ ಆ  ಕಡತವನ್ನಿರಿಸಿಕೊಂಡಿದ್ದ ಉಷಾ ಗಣೇಶ್ ಅವರಿಂದ ಕಡತವನ್ನು ಮುಖ್ಯಮಂತ್ರಿಗಳ ಕಚೇರಿಗೆ ತರಿಸಿಕೊಂಡರು.

ಆ ದಿನ ಸಾಯಂಕಾಲ ಭರತಾದ್ರಿ ಫೋನ್ ಮಾಡಿ 'ನಡೀರಿ, ನಾಳೆ ಬೆಂಗಳೂರಿಗೆ ಹೋಗಿ, ಧರ್ಮ ಸಿಂಗ್ ಅವರನ್ನು ಭೇಟಿ ಮಾಡೋಣ' ಅಂತಂದರು. ನಾನು ಹಿಂಬಾಲಿಸಿದೆ. ಐದೇ ಐದು ನಿಮಿಷದಲ್ಲಿ ಭರತಾದ್ರಿ ನನ್ನನ್ನು ಧರ್ಮ ಸಿಂಗ್ ಅವರೆದುರು ನಿಲ್ಲಿಸಿದ್ದರು. 'ಏನು ಭರತಾದ್ರಿ?' ಅಂದರು ಧರ್ಮ ಸಿಂಗ್. ಭರತಾದ್ರಿ ನನ್ನನ್ನು ಮುಂದೆ ಮಾಡಿದರು. ನಾನು ಸಂಕ್ಷಿಪ್ತವಾಗಿ ಕಡತದ ಕತೆ ಹೇಳಿದೆ. ಧರ್ಮ ಸಿಂಗ್ ಅವರು ಸರಕಾರದ ಕಾರ್ಯದರ್ಶಿಗಳಿಗೆ ಅಪ್ಪಣೆ ಮಾಡಿದರು. ಮುಂದಿನ ಕೆಲವು ದಿನಗಳಲ್ಲಿ ಸಂಘಕ್ಕೆ 50 ಲಕ್ಷ ರೂಪಾಯಿ ಬಂತು. ಭರತಾದ್ರಿಯವರನ್ನು ನೆನೆಸಿಕೊಂಡಾಗಲೆಲ್ಲ ಅವರ ಈ ಶಕ್ತಿ ಮತ್ತು ಸಹಾಯ ಕಣ್ಣೆದುರು ಬರುತ್ತದೆ. ಅವರ ಸಹಾಯ ಇಲ್ಲದಿದ್ದರೆ ಮುಚ್ಚಿ ಹೋಗಿದ್ದ ಆ ಕಡತ ಮೇಲೇಳುತ್ತಿರಲಿಲ್ಲ.

ಕಟ್ಟಡ ತ್ವರಿತವಾಗಿ ಮೇಲೇಳುತ್ತಿತ್ತು. ಪತ್ರಕರ್ತ ಮಿತ್ರರು ಸಂಘದ ವರ್ಚಸ್ಸನ್ನು ಹೆಚ್ಚಿಸಲು ಸಹಾಯ ಮಾಡಿದ್ದರು. ಮತ್ತೆ ಸರಕಾರಕ್ಕೆ 50 ಲಕ್ಷ ರೂಪಾಯಿಗಳ ಪ್ರಸ್ತಾವ ಸಲ್ಲಿಸಿದ್ದೆವು. ಆಗ ಎಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದರು. ಕಡತ ಎಂದಿನಂತೆ ಮತ್ತೆ ಉಷಾ ಗಣೇಶ್ ಅವರ ಕಚೇರಿಯಲ್ಲಿ ನಿಂತು ಹೋಗಿತ್ತು.

ನಾನೂ ಭರತಾದ್ರಿ ಮತ್ತೆ ಬೆಂಗಳೂರಿಗೆ ಹೊರಟೆವು. ಮೆಜೆಸ್ಟಿಕ್‌ನಲ್ಲಿರುವ ಕಾವೇರಿ ಹೋಟೆಲ್‌ನಲ್ಲಿ ನಾನು ಸ್ನಾನ ಮಾಡಿ ಹೊರ ಬರುವಷ್ಟರಲ್ಲಿ ಭರತಾದ್ರಿ ಕಡಿಮೆ ಎಂದರೆ 50 ಫೋನಾದ್ರೂ ಮಾಡಿರಬೇಕು. 'ಶ್ರೀನಿವಾಸ ಕಪ್ಪಣ್ಣ ಬರುತ್ತಾರೆ, ನಡೀರಿ ಮುಖ್ಯಮಂತ್ರಿಗಳ ಮನೆಗೆ' ಎಂದರು. ರಿಕ್ಷಾ ಹಿಡಿದು ಮುಖ್ಯಮಂತ್ರಿಗಳ ಮನೆ ತಲುಪಿದೆವು. ಕಪ್ಪಣ್ಣ ನಮಗಾಗಿ ಕಾಯುತ್ತಿದ್ದರು.

ಕುಮಾರಸ್ವಾಮಿಯರ ಆಗಮನವಾಗುತ್ತಲೇ ಅದು ಹೇಗೋ ಆ ಜನ ಜಂಗುಳಿಯ ನಡುವೆ ಒಳಗಡೆಗೆ ಸರಿದರು. ಅಲ್ಲೋ ಮತ್ತೆ ಜನ... ಜನ... ಜನ. ಒಂದೆರಡು ನಿಮಿಷದಲ್ಲಿ ತಲೆ ಎತ್ತಿ ನೋಡಿದ ಕುಮಾರಸ್ವಾಮಿಯವರು 'ಏನ್ ಕಪ್ಪಣ್ಣ' ಅಂದರು. ಕಪ್ಪಣ್ಣ ನನ್ನನ್ನು ಮುಂದೆ ತಳ್ಳಿ 'ದೆಹಲಿಯಿಂದ ಬಂದಿದ್ದಾರೆ' ಅಂದರು. ನಾನು ಅಹವಾಲು ತೋಡಿಕೊಂಡೆ. ಕುಮಾರಸ್ವಾಮಿಯವರು ತಾಳ್ಮೆಯಿಂದ ಮನವಿ ಆಲಿಸಿದರು. 'ಇಲ್ಲೇ ಇರಿ, ಕಡತ ತರಿಸ್ತೇನೆ, ಹಣ ಕೊಡೋಕೆ ಏನಂತೆ ಅಡ್ಡಿ?' ಎಂದರು. ಅರ್ಧ ಗಂಟೆಯಲ್ಲಿ ಕಡತ ಅವರ ಕೈಗೆ ಬಂತು. '50 ಲಕ್ಷ ರೂಪಾಯಿಗಳನ್ನು ಕೂಡಲೇ ಬಿಡುಗಡೆ ಮಾಡಿ' ಅಂತ ಟಿಪ್ಪಣಿ ಬರೆದರು. ಹಣಕಾಸಿನ ಇಲಾಖೆಯ ಕಾರ್ಯದರ್ಶಿಯಾಗಿದ್ದ ಸುಧಾಕರ ರಾವ್ ಅವರು ಒಂದೆರಡು ಗಂಟೆಗಳಲ್ಲಿ ಆದೇಶ ಹೊರಡಿಸಿದರು. ಕೆಲವು ದಿನಗಳಲ್ಲಿ ಹಣವೂ ಬಂತು. ಕಪ್ಪಣ್ಣನವರ ಸಾಹಸ, ಭರತಾದ್ರಿಯವರ ಯೋಜನೆ ಸರಿಯಾಗಿ ಕೆಲಸ ಮಾಡಿತ್ತು.

***

ಆ ದಿನ ಆಫೀಸ್‌ನಲ್ಲಿದ್ದೆ. ಕರ್ನಾಟಕ ಭವನದಿಂದ ಆಗ ಕರ್ನಾಟಕದ ಕೈಗಾರಿಕಾ ಸಚಿವರಾಗಿದ್ದ ಪಿ.ಜಿ.ಆರ್. ಸಿಂಧ್ಯ ಅವರ ದೂರವಾಣಿ ಕರೆ 'ಬಿಳಿಮಲೆ ಅವರೇ, ಸಂಘದ ಕಟ್ಟಡ ಚೆನ್ನಾಗಿ ಬರುತ್ತಿದೆಯಂತೆ, ಪತ್ರಿಕಾ ಮಿತ್ರರು ಹೇಳಿದರು, ನೋಡಲು ಬರಬಹುದೇ?' ಅಂದರು. 'ಸರ್, ಅರ್ಧ ಗಂಟೆ ಬಿಟ್ಟು ಬನ್ನಿ, ನಾನು ಗುರ್‌ಗಾಂವ್‌ನಲ್ಲಿದ್ದೇನೆ, ಬಂದು ಬಿಡ್ತೇನೆ' ಅಂದೆ. ಸಂಘ ತಲುಪುವಷ್ಟರಲ್ಲಿ ಸಿಂಧ್ಯ ಅವರು ಬಂದು ಬಿಟ್ಟಿದ್ದರು.

ಸರಸರನೆ ಕಟ್ಟಡದ ಕೆಲಸಗಳ ನಡುವೆ ಓಡಾಡಿ 'ಏನ್ರೀ ದೆಹಲಿಯಲ್ಲಿ ಕನ್ನಡಕ್ಕೆ ಇಂಥದ್ದೊಂದು ಕಟ್ಟಡ ಬರುವಾಗ, ನಾವೆಲ್ಲ ಸಹಾಯ ಮಾಡದಿದ್ರೆ ಹೇಗೆ? ಮನವಿ ಕೊಡಿ' ಎಂದರು. ಮನವಿಯನ್ನು ಕೈಯಲ್ಲಿ ಹಿಡಿದುಕೊಂಡೇ ಓಡಾಡುತ್ತಿದ್ದ ನಾವು ತಕ್ಷಣ ಕಳಿಸಿಕೊಟ್ಟೆವು. ಸಿಂಧ್ಯ ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿಯಿಂದ 10 ಲಕ್ಷ ರೂಪಾಯಿ ಹಾಗೂ ಮೈಸೂರ್ ಸೇಲ್ಸ್ ಇಂಟರ್ ನ್ಯಾಶನಲ್ ಲಿಮಿಟೆಡ್ ನಿಂದ 10 ಲಕ್ಷ ರೂಪಾಯಿ ಹೀಗೆ ಒಟ್ಟು 20 ಲಕ್ಷ ರೂಪಾಯಿಗಳನ್ನು ಕಳುಹಿಸಿಕೊಟ್ಟರು.

ಪತ್ರಕರ್ತ ಗೆಳೆಯ ಆಗ ಕನ್ನಡ ಪ್ರಭದಲ್ಲಿದ್ದ ಡಿ. ಉಮಾಪತಿ ಅವರು ಫೋನ್ ಮಾಡಿ,'ಅಭಿನಂದನೆಗಳು ಸರ್, ಸಿಂಧ್ಯ ಅವರು ಹೇಳಿದ್ರು, ಓಎನ್‌ಜಿಸಿ ಯಿಂದ ಸಂಘಕ್ಕೆ 30 ಲಕ್ಷ ರೂಪಾಯಿಗಳ ಅನುದಾನ ಬಿಡುಗಡೆಯಾಗಿದೆಯಂತೆ, ಒಂದೆರಡು ದಿನಗಳಲ್ಲಿ ಹಣ ದೊರೆಯಬಹುದು' ಎಂದರು. ಆದರೆ ಸಂಘದ ದುರಾದೃಷ್ಟವೋ ಏನೋ ಎಂಬಂತೆ ಒಂದೆರಡು ದಿನಗಳಲ್ಲಿ ಕರ್ನಾಟಕದ ರಾಜಕೀಯದಲ್ಲಿ ಮಹತ್ವದ ಬದಲಾವಣೆಗಳಾದುವು. ಸಿಂಧ್ಯ ಅವರು ತಮ್ಮ ಮಂತ್ರಿ ಪದವಿಯನ್ನು ಕಳೆದುಕೊಂಡರು. ಓಎನ್‌ಜಿಸಿಯವರು ಹಣ ಬಿಡುಗಡೆ ಮಾಡಲೇ ಇಲ್ಲ. ಸಿಂಧ್ಯ ಅವರು ಸಂಘದ ಮೇಲೆ ಇಟ್ಟ ಪ್ರೀತಿ ವಿಶೇಷವಾದುದು.

***

ದೆಹಲಿ ಸರಕಾರದ ಹಣಕಾಸಿನ ಕಾರ್ಯದರ್ಶಿಗಳಾಗಿದ್ದ ವಿ.ವಿ. ಭಟ್ಟರು, 'ದೆಹಲಿ ಕಲ್ಯಾಣ ಸಮಿತಿಯಲ್ಲಿ ಈ ಬಗೆಯ ಸಾಂಸ್ಕೃತಿಕ ಕಟ್ಟಡಕ್ಕೆ ಹಣ ನೀಡಲು ಅವಕಾಶವಿದೆಯೆಂದೂ, ಅರ್ಜಿ ಸಲ್ಲಿಸಿ ಒಮ್ಮೆ ಮುಖ್ಯಮಂತ್ರಿ ಶೀಲಾ ದೀಕ್ಷಿತರನ್ನು ಭೇಟಿ ಮಾಡಿ' ಎಂದೂ ಸಲಹೆ ನೀಡಿದರು. ಆ ಪ್ರಕಾರ ಅರ್ಜಿ ಸಲ್ಲಿಸಲಾಯಿತು.

ನಾವು ಹಲವರು ಒಂದು ಶನಿವಾರ ಮುಖ್ಯಮಂತ್ರಿಗಳ ಮನೆಗೂ ಹೋದೆವು. 'ಏನು?' ಅಂತ ಕೇಳಿದರು, ನಾವು ನಮ್ಮ ಅಹವಾಲು ತೋಡಿಕೊಂಡೆವು. 'ಕನ್ನಡಿಗರು ಅಂದರೆ ನನಗೆ ತುಂಬಾ ಇಷ್ಟ, ಕಚೇರಿಗಳಲ್ಲಿ ತುಂಬಾ ಚೆನ್ನಾಗಿ ಕೆಲಸ ಮಾಡ್ತಾರೆ, ಕಲ್ಯಾಣ ಸಮಿತಿಯಿಂದ ಸಾಧ್ಯವಾದಷ್ಟು ಕೊಡಿಸುತ್ತೇನೆ. ಈ ಕುರಿತು ಇನ್ಯಾರನ್ನೂ ಭೇಟಿ ಮಾಡಬೇಡಿ' ಅಂದರು. ಹದಿನೈದು ದಿನಗಳಲ್ಲಿ 25 ಲಕ್ಷ ರೂಪಾಯಿಗಳ ಚೆಕ್ ನಮ್ಮ ಮುಂದಿತ್ತು.

ವಿ. ವಿ. ಭಟ್ಟರು ಮೌನವಾಗಿ ಕೆಲಸ ಮಾಡಿದ್ದರು. ಅವರೇ ಮುಂದೆ ಕಸ್ತೂರಿ ರಂಗನ್ ಅವರ ಸಂಸದರ ನಿಧಿಯಿಂದ ಮತ್ತೆ 15 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿಸಿಕೊಟ್ಟರು.

***

ಕಟ್ಟಡದ ಕೆಲಸ ಶುರುವಾಗುತ್ತಲೇ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರಿಗೆ ಒಂದು ಪುಟದ ಪತ್ರ ಬರೆದಿದ್ದೆ. ಪತ್ರ ತಲುಪಿದ ದಿನವೇ ಐದು ಲಕ್ಷ ರೂಪಾಯಿ ಗಳನ್ನು ಅವರು ಕಳಿಸಿಕೊಟ್ಟಿದ್ದರು. ಅದೇ ರೀತಿ ಪತ್ರ ನೋಡಿ ಹಣ ಕಳಿಸಿದವರಲ್ಲಿ ಇನ್ಫೋಸಿಸ್ ಫೌಂಡೇಷನ್ನಿನ ಸುಧಾಮೂರ್ತಿಯವರೂ ಒಬ್ಬರು. ಅವರು 10 ಲಕ್ಷ ರೂಪಾಯಿಗಳನ್ನು ಗ್ರಂಥಾಲಯಕ್ಕೆಂದು ಕಳಿಸಿಕೊಟ್ಟಿದ್ದರು, ಜೊತೆಗೊಂದು ಕಂಪ್ಯೂಟರ್ ಕೂಡಾ.

***

ದೆಹಲಿಯ ಹಿರಿಯ ಕನ್ನಡತಿ, ನೇತ್ರಾವತಿ ಮಯ್ಯ ಅವರು ಒಂದಿನ ಫೋನ್ ಮಾಡಿ, 'ನನ್ನ ಮಗಳ ಹೆಸರಿನಲ್ಲಿ ಸ್ವಲ್ಪ ಹಣ ಇದೆ, ಸಂಘಕ್ಕೆ ಕೊಡಬೇಕೆಂದಾಸೆ' ಎಂದರು, ನಾನೂ ಕೃಷ್ಣ ಭಟ್ಟರು ಅವರ ಮನೆಗೆ ಹೋದೆವು.

ಕಾಫಿಕೊಟ್ಟು ಸತ್ಕರಿಸಿದ ಅವರು, ಗೋವಿಂದ ಪೈಗಳು ಅವರ ಮಂಗಲಪಾಡಿಯ ಮನೆಯಲ್ಲಿ ತಿಂಡಿ ತಿಂದ ಕತೆ ಹೇಳಿ 275770 ರೂಪಾಯಿಗಳ ಚೆಕ್ ನೀಡಿದರು. ಅವರೇ ಮುಂದೆ ಒಂದು ದಿನ 30 ಸಾವಿರ ರೂಪಾಯಿಗಳನ್ನು ತಂದು ನನ್ನ ಕೈಗೆ ನೀಡಿ, ನನ್ನ ಗಂಡನ ಹೆಸರಿನಲ್ಲಿ ಸಂಘದಲ್ಲಿ ಏನಾದ್ರೂ ಮಾಡಿ ಎಂದರು. ನಾನು ಅವರ ಹೆಸರಿನಲ್ಲಿ ಎರಡು ಪೈಂಟಿಂಗ್‌ಗಳನ್ನು ತಂದು ಸಂಘದಲ್ಲಿ ಹಾಕಿದೆ, ಅವು ಇಂದೂ ರಾರಾಜಿಸುತ್ತಿವೆ.

***

ಡಾ. ಬಿ. ವಿ. ಶಿರೂರು ಅವರು ಗುಲಬರ್ಗಾದಿಂದ ಯುಜಿಸಿ ಕೆಲಸಕ್ಕೆ ಬಂದಿದ್ದರು. ಅವರ ಜೊತೆಗೆ ಇನ್ನೂ ಅನೇಕ ಸಾಹಿತಿ ಮಿತ್ರರಿದ್ದರು. ನಾನು ಅವರನ್ನು ಕಟ್ಟಡದ ಕೆಲಸ ತೋರಿಸಲು ಕರೆದುಕೊಂಡು ಬಂದಿದ್ದೆ. ಊರಿಗೆ ಹೋದ ಆನಂತರ ಡಾ. ಶಿರೂರು ಅವರು ಐದು ಸಾವಿರ ರೂಪಾಯಿಗಳ ಚೆಕ್ ಕಳಿಸಿಕೊಟ್ಟಿದ್ದರು.

***

ಕಟ್ಟಡದ ಉದ್ಘಾಟನೆಯ ಸಂದರ್ಭದಲ್ಲಿ ಸ್ಮರಣ ಸಂಚಿಕೆಯೊಂದನ್ನು ತರಲು ಯೋಜಿಸಲಾಗಿತ್ತು. ದೇವಾನಂದ ಉಪಾಧ್ಯಾಯ, ಸಿ. ವಿ. ಭಟ್, ಮಹಾಬಲೇಶ್ವರ ಭಟ್ ಮೊದಲಾದ ಮಹನೀಯರು 22 ಲಕ್ಷ ರೂಪಾಯಿಗಳಿಗೂ ಮೀರಿ ಹಣ ಸಂಗ್ರಹಿಸಿದರು. ಒಳ್ಳೆಯ ಸಂಚಿಕೆಯೂ ಬಂತು. ಖರ್ಚು ಕಳೆದು ಸುಮಾರು 18 ಲಕ್ಷ ರೂಪಾಯಿಗಳು ಕಟ್ಟಡ ನಿಧಿಗೂ ಸಂದಾಯವಾಯಿತು.

***

ಮೊನ್ನೆ ರಾಷ್ಟ್ರಪತಿ ಪ್ರಶಸ್ತಿ ಪಡೆದ ಶಿಕ್ಷಕ ಶಿಕ್ಷಕಿಯರು ಸಂಘಕ್ಕೆ ಬಂದಿದ್ದರು. ಸಂಘವನ್ನು ಕಂಡು ಸಂತೋಷಗೊಂಡ ಶಿಕ್ಷಕಿಯೊಬ್ಬರು ಪ್ರಶಸ್ತಿಯ ಹಣವನ್ನು ಸಂಘಕ್ಕೆ ನೀಡಿದರು.

***

ಸಂಘದ ಸಾಲ ಮುಗಿಯಿತೆಂದಾಗ ಮತ್ತೆ ಎಲ್ಲ ನೆನಪಾಗುತ್ತಿದೆ. ಸಂಘದ ಅತ್ಯಂತ ಕ್ಲಿಷ್ಟಕರ ದಿನಗಳಲ್ಲಿ ಗೆಳೆಯರೊಡಗೂಡಿ ಕೆಲಸ ಮಾಡಲು ಅವಕಾಶ ಸಿಕ್ಕಿದ್ದಕ್ಕಾಗಿ ಸಂತೋಷವೂ ಆಗುತ್ತಿದೆ. ಅ

***ಡಾ. ಪುರುಷೋತ್ತಮ ಬಿಳಿಮಲೆ***

ಈ ಸಲದ ಭಾವನೆಯ ಬಳ್ಳಿಯನ್ನು ಪೋಷಿಸಲು ಕತೆಗಾರ, ಲೇಖಕ ಪ್ರೇಮಶೇಖರ್ ಅವರು ತಮ್ಮ ಬರಹದ ಮೂಲಕ ಓದುಗರೊಡನೆ ಆತ್ಮೀಯ ವಿಷಯಗಳನ್ನು ಹಂಚುತ್ತಿದ್ದಾರೆ.

# ಈ ಸೆಳೆತಕ್ಕೆ ಯಾವ ಹೆಸರಿಡಲಿ?

ಗಳಗನಾಥರ "ಮಾಧವಕರುಣಾವಿಲಾಸ"ದಿಂದ ಹಿಡಿದು ಹೋಮರ್‌ನ "ಇಲಿಯಡ್" ಮತ್ತು "ಒಡಿಸ್ಸಿ"ಯವರೆಗೆ ಏನುಂಟು ಏನಿಲ್ಲ ಎನ್ನುವಂತಿದ್ದ ಅಕ್ಕನ ಅಗಾಧ ಪುಸ್ತಕರಾಶಿ; ಪ್ರತಿ ವಾರ ಮನೆಗೆ ಬರುತ್ತಿದ್ದ ಸುಧಾ, ಮನೋಹರ್ ಕಹಾನಿಯಾ, ಇಂಡಿಯಾ ಟುಡೇ, ಕ್ಯಾರವಾನ್, ಸಂಡೇ; ತಿಂಗಳಿಗೊಮ್ಮೆ ತಪ್ಪದೇ ಕೈಸೇರುತ್ತಿದ್ದ, ಕಸ್ತೂರಿ, ಮಯೂರ, ತುಷಾರ, ಮಲ್ಲಿಗೆ, ಸತ್ಯಕಥಾ, ಸರಿತಾ, ರೀಡರ್ಸ್ ಡೈಜೆಸ್ಟ್; ನನ್ನ ಪಠ್ಯವಿಷಯಗಳು ಹಾಗೂ ಇತರೆಲ್ಲಾ ಆಸಕ್ತಿಯ ವಿಷಯಗಳಿಗೆ ಸಂಬಂಧಿಸಿದಂತೆ ಅಗಣಿತ ಪುಸ್ತಕಗಳನ್ನು ಹೊಂದಿದ್ದ ಡೆಲ್ಲಿ ಯೂನಿವರ್ಸಿಟಿಯ ಬೃಹತ್ ಲೈಬ್ರರಿ! ಯಾರಿಗುಂಟು ಯಾರಿಗಿಲ್ಲ ಈ ಪುಸ್ತಕ ಸಾಮ್ರಾಜ್ಯ ವೈಭವ! ನಾನೇ ಕೈಯಾರೆ ಕಾಸು ಕೊಟ್ಟು ಪುಸ್ತಕಗಳನ್ನು ಕೊಳ್ಳಬೇಕಾದ ಅಗತ್ಯವೇ ನನಗಿರಲಿಲ್ಲ. ತಿಂಗಳು ತಿಂಗಳೂ ಅಕ್ಕ ಕೊಡುತ್ತಿದ್ದ ಪಾಕೆಟ್ ಮನಿ ಖರ್ಚಾಗುತ್ತಿದ್ದುದು ನನ್ನ ಸಂಗ್ರಹಕ್ಕೆ ಹೊಸ ಹೊಸ ಅಂಚೆಚೀಟಿಗಳನ್ನು ಕೊಳ್ಳುವುದಕ್ಕೆ ಅಥವಾ ಅಲ್ಲಿ ಇಲ್ಲಿಗೆ ಹೋದಾಗ ಚಂದ ಕಂಡ ಪುಟಾಣಿ ಪರ್ಸುಗಳನ್ನೋ, ಮಣಿಗಳನ್ನೋ, ಬೀಸಣಿಗೆಗಳನ್ನೋ ತಂದು ಅಕ್ಕನಿಗೇ ಕೊಡುವುದಕ್ಕೆ ಮಾತ್ರ. ಅಂಥಾ ಸುವರ್ಣಯುಗ ಅದು.

1983ರಲ್ಲಿ ದೂರದ ಡೆಲ್ಲಿ ಯೂನಿವರ್ಸಿಟಿಯಲ್ಲಿ ಎಂಎ ಮುಗಿಸಿದರೂ, ಮನೆಗೆ ಸನಿಹದಲ್ಲೇ, ಎಡವಿಬಿದ್ದರೆ ತಲುಪೇಬಿಟ್ಟೆ ಎನ್ನುವಷ್ಟು ಹತ್ತಿರದಲ್ಲೇ ಇದ್ದ ಜವಾಹರ್‌ಲಾಲ್ ನೆಹರೂ ಯೂನಿವರ್ಸಿಟಿಯಲ್ಲಿ ಆ ವರ್ಷ ಎಂಫಿಲ್‌ಗೆ ಸೇರಲಾಗಲಿಲ್ಲ. ನನ್ನದೇನೂ ತಪ್ಪಿರಲಿಲ್ಲ. ವಿದ್ಯಾರ್ಥಿಗಳ ದಂಗೆಯಿಂದಾಗಿ ಆ ವರ್ಷ ಅಲ್ಲಿ ಅಡ್ಮಿಷನ್ ಇರಲೇ ಇಲ್ಲ. ಹೀಗಾಗಿ ಒಂದಿಡೀ ವರ್ಷ ಉಂಡಾಡಿಗುಂಡನಂತೆ ಕಾಲ ಕಳೆಯುವ ಅವಕಾಶ! ಯಾರಿಗುಂಟು ಯಾರಿಗಿಲ್ಲ ಈ ಅದೃಷ್ಟ! ಮನೆಯಲ್ಲಿದ್ದ ಎಲ್ಲ ಪುಸ್ತಕಗಳನ್ನೂ ಓದಿ ಮುಗಿಸಿ, ಕೆಲವನ್ನು ಎರಡುಮೂರು ಸಲ ಓದಿ, ಪುಸ್ತಕದ ಹಸಿವು ತಡೆಯದಾದಾಗ ಒಂದು ಆರಾಮದ ವಾಕಿಂಗ್‌ನಷ್ಟು ಹತ್ತಿರದ ಕಟ್ವಾರಿಯಾ ಸರಾಯ್‌ನಲ್ಲಿದ್ದ ಗುರುನಾನಕ್ ಲೈಬ್ರರಿಯಲ್ಲಿ ಕೂಲರ್ ಪಕ್ಕವೇ ಜಾಗ ಹಿಡಿದು ಕೂತು ಗಯಾನಾದ ಇಂಡಿಯನ್ನರ ಮಿಡ್‌ವೈಫ್‌ರಿಂದ ಹಿಡಿದು, ಇಂಡಿಯಾದ ಇಂಡಿಯನ್ನರ ಸ್ವಾತಂತ್ರ್ಯದ ಕಥೆ "ಫ್ರೀಡಂ ಅಟ್ ಮಿಡ್‌ನೈಟ್"ವರೆಗೆ ಸಿಕ್ಕಸಿಕ್ಕದ್ದೆಲ್ಲವನ್ನೂ ಓದಿದರೂ ಇನ್ನೂ ಬೇಕು ಅನಿಸಿದಾಗ ಕೊನೆಗೆ ಉಳಿದ ಮಾರ್ಗ ಒಂದೇ– ಪುಸ್ತಕದ ಅಂಗಡಿಗಳಿಗೆ ಹೋಗಿ ನನಗೆ ಬೇಕಾದ್ದನ್ನು ಕೊಂಡುತಂದು ಓದುವುದು!

ಇದುವರೆಗೂ ಕೇವಲ ಸ್ಟ್ಯಾಂಪ್ಸ್ ಕೊಳ್ಳಲು ಹೋಗುತ್ತಿದ್ದ ಸೌತ್ ಎಕ್ಸ್‌ಟೆನ್ಷನ್ ಮಾರ್ಕೆಟ್‌ನಲ್ಲಿದ್ದ ಸೆಹ್‌ಗಲ್ ಬ್ರದರ್ಸ್‌ನಲ್ಲಿ ಸ್ಟ್ಯಾಂಪ್ಸ್‌ಗಳಿಗಿಂತಲೂ ಪುಸ್ತಕಗಳೇ ಹೆಚ್ಚಾಗಿವೆ ಎಂಬ ಸತ್ಯ ನೆನಪಾಗಿ ಅಲ್ಲಿಗೆ ಹೋದೆ. ಪಕ್ಕದ ಟೆಕ್‌ಸನ್ಸ್‌ಗೂ ಹೋದೆ. ಎರಿಕ್ ವಾನ್ ಡ್ಯಾನಿಕೆನ್‌ನ ಕ್ರೇಜ್ ಹತ್ತಿದ್ದ ಆ ಕಾಲದಲ್ಲಿ ಅವನದು ಒಂದಷ್ಟು, ದ್ವಿತೀಯ ಮಹಾಯುದ್ಧದ ಬಗೆಗಿನ ಹೆರ್ಮಾನ್ ವೂಕ್‌ನ ಎರಡು ಸಂಪುಟಗಳ ಅದ್ಭುತ ಆಖ್ಯಾಯಿಕೆ, ಜತೆಗೆ ಆ ಗಳಿಗೆಯಲ್ಲಿ ಆಸಕ್ತಿ ಹುಟ್ಟಿಸಿದ ಒಂದಷ್ಟು ಕೊಂಡುತಂದೆ. ಡಾಲರ್ ಮತ್ತು ಪೌಂಡ್‌ಗಳು ರೂಪಾಯಿಗಳಾಗಿ ಅರಳಿಕೊಳ್ಳುತ್ತಿದ್ದ ಆ ಅಂಗಡಿಗಳಲ್ಲಿ ನನ್ನ ಪುಟ್ಟ ಪರ್ಸ್ ತೀರಾ ದಯನೀಯವಾಗತೊಡಗಿದ ಅರಿವು ಒಂದೆರಡು ಭೇಟಿಗಳಲ್ಲೇ ಆಗಿ ಖಿನ್ನನನ್ನಾಗಿಸಿತು. ಅದೇ ಸಮಯದಲ್ಲಿ ಒಂದು ಸಂಜೆ ಬಿಳೀ ಹಾಳೆಗಳನ್ನು ತರಲೆಂದು, ಮಾಮೂಲಾಗಿ ಹೋಗುತ್ತಿದ್ದ ಶಾಪಿಂಗ್ ಸೆಂಟರಿನಲ್ಲಿದ್ದ ಬಂಗಾಳಿ ಆಂಟಿಯ ಸ್ಟೇಷನರಿ ಅಂಗಡಿ ಮುಚ್ಚಿದ್ದರಿಂದಾಗಿ ಹಾಗೇ ನಡೆಯುತ್ತಾ, ಜೆಎನ್‌ಯುನಲ್ಲಿದ್ದ ಗೀತಾ ಬುಕ್ ಡಿಪೋಗೆ ಹೋದಾಗ ಕಂಡದ್ದು ನಿಧಿ. ರಾಶಿ ರಾಶಿ ರಶಿಯನ್ ಪುಸ್ತಕಗಳು! ಟಾಲ್‌ಸ್ಟಾಯ್, ಗಾರ್ಕಿ, ಚೆಕೋವ್, ತುರ್ಗೆನೆವ್, ಪುಷ್ಕಿನ್, ಗೊಗೋಲ್, ಗ್ರೊಂಬಿಚೆವ್‌ಸ್ಕಿ... ಯಾವ ಪುಸ್ತಕದ ಬೆಲೆಯೂ ಹತ್ತು ರೂಪಾಯಿಗಳಿಗಿಂತ ಹೆಚ್ಚಿಲ್ಲ! ಗಾರ್ಕಿಯ ಆತ್ಮಕಥೆಯ ಮೊದಲ ಭಾಗ "ಮೈ ಚೈಲ್ಡ್‌ಹುಡ್" ಬೆಲೆ ಒಂದೇ ರೂಪಾಯಿ! ಚೆಕೋವ್ ಕಥೆಗಳ ಸಂಗ್ರಹಕ್ಕೆ ಮೂರು ರೂಪಾಯಿ! ಬೇಕಾದ್ದನ್ನೆಲ್ಲಾ ಕೊಂಡುಕೊಳ್ಳುವ ಶ್ರೀಮಂತ ನಾನು ಅಂತ ಅನಿಸಿದ್ದು ಅಂದು. ಗೀತಾ ಬುಕ್ ಡಿಪೋಗೆ ಮತ್ತೆ ಮತ್ತೆ ಹೋದೆ...

ಹೀಗೇ ಕನ್ನಡ ಪುಸ್ತಕಗಳೂ ಸಿಕ್ಕಿಬಿಟ್ಟರೆ...?

ಏನನ್ನಾದರೂ ಪ್ರಾಮಾಣಿಕವಾಗಿ, ಉತ್ಕಟವಾಗಿ ಬಯಸಿದರೆ ವಿಧಿ ನಮಗರಿವಿಲ್ಲದಂತೆ ನಮ್ಮನ್ನು ಅದರತ್ತ ಕರೆದೊಯ್ಯುತ್ತದಂತೆ!

ಅದು ಡಿಸೆಂಬರ್ ತಿಂಗಳ ಒಂದು ಚಳಿಯ ಬೆಳಗು.

ಸರಕಾರಿ ಪುಸ್ತಕಸಂಸ್ಥೆಯೊಂದರ ಹೊಸ ಪ್ರಕಟಣೆಗಳ ಬಗ್ಗೆ ಆ ದಿನದ ಪತ್ರಿಕೆಯಲ್ಲೊಂದು ಪುಟ್ಟ ಜಾಹೀರಾತು, ವಿವಿಧ ಭಾರತೀಯ ಭಾಷೆಗಳಲ್ಲಿ ಹೊಸ ಪುಸ್ತಕಗಳಿವೆಂಬ ಸೂಚನೆ, ಭಾಷೆಗಳ ಪಟ್ಟಿಯಲ್ಲಿ ಕನ್ನಡವೂ! ಖುಷಿಯಾಗಿಬಿಟ್ಟಿತು. ಮಾರಾಟ ಮಳಿಗೆಯ ಅಡ್ರೆಸ್ ನೋಡಿದರೆ ಅದು ಮನೆಯಿಂದ ಅಷ್ಟೇನೂ ದೂರವಿಲ್ಲ!

ಗಡಬಡಿಸಿ ಸ್ನಾನ ಮಾಡಿದೆ. ತಿಂಡಿ ತಿಂದೇ ಇರಬೇಕು ಇಲ್ಲದಿದ್ದರೆ ಹೊರಹೋಗಲು ಅಕ್ಕ ಬಿಟ್ಟಿರುವ ಸಾಧ್ಯತೆ ಇಲ್ಲ. ಆತುರಾತುರವಾಗಿ ತಯಾರಾಗಿ ಹೊರಹಾರಿದೆ.

ಚಳಿಗಾಲದ ಸುಂದರ ಬೆಳಗು, ಬಿಸಿಲು ಚಂದ ಇತ್ತು. ಸುತ್ತಿ ಬಳಸಿಹೋಗುತ್ತವೆ ಎಂದು 511, 618 ಬಿಟ್ಟೆ. 507 ಬಂದದ್ದೆ ಖುಶಿಯಿಂದ ಒಳನುಗ್ಗಿ ಗ್ರೀನ್ ಪಾರ್ಕ್‌ನಲ್ಲಿ ಇಳಿದು ದಟ್ಟನೆರಳಿನ ಸರ್ವಿಸ್ ರಸ್ತೆ ಸೇರಿ ನಂಬರ್‌ಗಳನ್ನು ನೋಡುತ್ತಾ ಎಡಕ್ಕೇ ಕತ್ತುಹೊರಳಿಸಿಕೊಂಡು ಮುಂದೆ ನಡೆದೆ. ಎರಡು ನಿಮಿಷಗಳಲ್ಲಿ ಪುಸ್ತಕದ ಮಳಿಗೆಯ ಮುಂದಿದ್ದೆ.

ಮಳಿಗೆಯ ಬಾಗಿಲು ತೆರೆದಿತ್ತು. ಟೇಬಲ್ ಮೇಲೆ ಪುಸ್ತಕವೊಂದನ್ನು ಹರಡಿ ಅದರಲ್ಲಿ ಮಗ್ನಳಾಗಿದ್ದ ಹೆಂಗಸೊಬ್ಬಳ ಹೊರತಾಗಿ ಒಂದು ನರಪಿಳ್ಳೆಯೂ ಇರಲಿಲ್ಲ. ಆದರೆ ಪುಸ್ತಕಗಳಿದ್ದವು.

ನನ್ನತ್ತ ಒಮ್ಮೆ ತಲೆಯೆತ್ತಿ ನೋಡಿ ಮತ್ತೆ ಪುಸ್ತಕದಲ್ಲಿ ಮುಳುಗಿಹೋದವಳನ್ನು ನಿರ್ಲಕ್ಷಿಸಿ ಕನ್ನಡ ಪುಸ್ತಕಗಳಿಗಾಗಿ ಕಣ್ಣಾಡಿಸಿದೆ. ಬಂಗಾಲಿ, ಒರಿಯಾಗಳಾಚೆ ಕಂಡೇಬಿಟ್ಟವು. ನಾನು ನಿಧಿ ತುಂಬಿದ ಕೊಪ್ಪರಿಕೆಯ ಮುಂದೆ ನಿಂತಿದ್ದೆ.

ಮಹಮದ್ ಬಶೀರ್ ಅವರ "ಪಾತುಮ್ಮನ ಆಡು ಮತ್ತು ಬಾಲ್ಯಕಾಲ ಸಖಿ", ಎಂ. ಟಿ. ವಾಸುದೇವನ್ ನಾಯರ್‌ರ "ಚೌಕಟ್ಟಿನ ಮನೆ", ನಾನಕ್ ಸಿಂಗ್‌ರ "ಬಿಳಿಯ ರಕ್ತ", ತಮಿಳು, ಮಲಯಾಳಂ, ತೆಲುಗು, ಒರಿಯಾ, ಉರ್ದು ಕಥಾಸಂಕಲನಗಳು, ಜಿ. ಹೆಚ್. ನಾಯಕರು ಸಂಪಾದಿಸಿದ್ದ "ಕನ್ನಡ ಸಣ್ಣಕಥೆಗಳು"... ಬೆಲೆ? ಒಂದೂಕಾಲು, ಒಂದೂವರೆ, ಒಂದೂಮುಕ್ಕಾಲು, ಎರಡು, ಎರಡೂವರೆ, ಮೂರು, ಮೂರೂವರೆ... ಅಷ್ಟೇ. ತುಂಬಾ 'ಕಾಸ್ಟ್ಲಿ' ಮಾಲೆಂದರೆ ಕನ್ನಡ ಸಣ್ಣಕಥೆಗಳು! ಮೊಣಕಾಲಷ್ಟೇ ಆಳದ ಗುಂಡಿಯಲ್ಲಿ ಚಂಗ್ ಚಂಗ್ ಎಂದು ಚಿಮ್ಮುವ ಮೀನುಗಳನ್ನು ಹಿಡಿದಿಡಿದು ಬುಟ್ಟಿಗೆ ತುಂಬಿಕೊಳ್ಳುವಂತೆ ಎತ್ತೆತ್ತಿ ಎದೆಗವಚಿಕೊಂಡೆ.

ಇದು ಆರಂಭ.

ಒಂದು ವಾರದಲ್ಲಿ ಅಲ್ಲಿಗೆ ಮತ್ತೆ ಹೋದೆ. ನನಗಿಷ್ಟವಾದವುಗಳನ್ನೆಲ್ಲಾ ಕೊಂಡುಕೊಳ್ಳುವವರೆಗೆ ಮತ್ತೆಮತ್ತೆ ಹೋದೆ. ಹಲವು ಸಲ ಹಿಂತಿರುಗುವಾಗ ಜೇಬಿನಲ್ಲಿ ಬಸ್ ಚಾರ್ಜಿಗೂ ಕಾಸಿಲ್ಲದೇ ಪುಸ್ತಕಗಳನ್ನು ಎದೆಗೊತ್ತಿ ಹಿಡಿದು ಔಟರ್ ರಿಂಗ್ ರೋಡ್‌ನಲ್ಲಿ ಮೂರು ಕಿಲೋಮೀಟರ್ ನಡೆದು ಮನೆ ತಲುಪಿದ್ದೂ ಉಂಟು. ಅ

**ಪ್ರೇಮಶೇಖರ**



### ದೆಹಲಿ ಪೋಲೀಸ್ ಗಣೇಶೋತ್ಸವ

ದೆಹಲಿ ಪೋಲೀಸ್ ಕನ್ನಡಿಗ ವೆಲ್ಫೇರ್ ಅಸೋಸಿಯೇಶನ್ ವತಿಯಿಂದ 11ನೇ ವರ್ಷದ ಗಣೇಶೋತ್ಸವವನ್ನು ಅಶೋಕ್ ವಿಹಾರ್ ಪೋಲಿಸ್ ಕಾಲೋನಿಯ ಕಮ್ಯುನಿಟಿ ಸೆಂಟರ್‌ನಲ್ಲಿ ಸೆಪ್ಟೆಂಬರ್ 9ರಿಂದ 15ರ ವರೆಗೆ ಆಚರಿಸಲಾಯಿತು. ಸಮಾರಂಭದಲ್ಲಿ ಶ್ರೀ ಹರೀಶ್ ಹೆಚ್.ಪಿ. ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಶ್ರೀ ಸಿದ್ದಪ್ಪ, ನಿವೃತ್ತ ಎಸ್.ಐ. ಅವರನ್ನು ಸನ್ಮಾನಿಸಲಾಯಿತು.

*ಹೆಚ್.ಜಿ. ಶಿವರಾಂ*

### ಗುರ್‌ಗಾಂವ್ ಕನ್ನಡ ಸಂಘದ ಗಣೇಶೋತ್ಸವ

ಗುರ್‌ಗಾಂವ್ ಕನ್ನಡ ಸಂಘದ ವತಿಯಿಂದ ಗಣೇಶೋತ್ಸವವು ಗುರ್‌ಗಾಂವ್‌ನ ರಾಧಾಕೃಷ್ಣ ಮಂದಿರದಲ್ಲಿ ಸೆಪ್ಟೆಂಬರ್ 9 ರಿಂದ 15ರವರೆಗೆ ನಡೆಯಿತು. ಶ್ರೀ ಸತೀಶ್ ಬಸವಾರಾಧ್ಯ, ಶ್ರೀ ಸಂತೋಷ್, ಶ್ರೀ ಬೋಪಣ್ಣ, ಶ್ರೀ ಸಾಯಿ ಪ್ರಸಾದ್, ಶ್ರೀ ಆನಂದ್, ಶ್ರೀ ಸಾಬು ದರ್ಗ, ಶ್ರೀ ಈಶ್ವರಲಿಂಗ, ಶ್ರೀ ಗಜಾನನ ಶರ್ಮ, ಮೊದಲಾದವರು ವಿವಿಧ ಚಟುವಟಿಕೆಗಳಲ್ಲಿ ಸಹಕರಿಸಿದರು.

*ದಯಾನಂದ*





### ಜನಕಪುರಿ ಕನ್ನಡಕೂಟದ ಗಣೇಶೋತ್ಸವ ಆಚರಣೆ

ಜನಕಪುರಿ ಕನ್ನಡಕೂಟದ ವತಿಯಿಂದ ಜನಕಪುರಿಯ ಶ್ರೀರಾಮ ಮಂದಿರದಲ್ಲಿ ಗಣೇಶೋತ್ಸವವನ್ನು ಸೆಪ್ಟೆಂಬರ್ 15ರಂದು ಆಚರಿಸಲಾಯಿತು. ಕನ್ನಡಕೂಟದ ಸದಸ್ಯರಾದ ಶ್ರೀಮತಿ ಮತ್ತು ಶ್ರೀ ಶಿವರಾಮ ರೈ ಹಾಗೂ ಶ್ರೀಮತಿ ಮತ್ತು ಶ್ರೀ ನರಸಿಂಹಮೂರ್ತಿ ಪೂಜಾ ವಿಧಿವಿಧಾನಗಳಲ್ಲಿ ಭಾಗವಹಿಸಿದ್ದರು. ಗಣೇಶಪೂಜೆಯ ನಂತರ ಗಣಹೋಮವನ್ನು ನಡೆಸಲಾಯಿತು.

ಕನ್ನಡಕೂಟದ ಕಾರ್ಯದರ್ಶಿ ಶ್ರೀ ಎನ್. ಪ್ರಕಾಶ್ ದಂಪತಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಚಂದ್ರಮೌಳಿ ದಂಪತಿಗಳು ಭೋಜನ ವ್ಯವಸ್ಥೆ ಮಾಡಿದ್ದರು. ಕನ್ನಡ ಕೂಟದ ಅಧ್ಯಕ್ಷರಾದ ಶ್ರೀ ಬಿ.ಕೆ. ಬಸವರಾಜು, ಕಾರ್ಯಕಾರಿ ಸಮಿತಿಯ ಎಲ್ಲ ಪದಾಧಿಕಾರಿಗಳು, ಹಿರಿಯ ಸದಸ್ಯರಾದ ಡಾ. ಶಶಿ ಕುಮಾರ್, ಶ್ರೀ ಕೆ.ಎಸ್.ಜಿ. ಶೆಟ್ಟಿ ಮೊದಲಾದವರು ಗಣೇಶೋತ್ಸವದ ಆಚರಣೆಯನ್ನು ಯಶಸ್ವಿಯಾಗಿ ನಡೆಸಲು ಸಹಕರಿಸಿದರು.

*ಎನ್. ಪ್ರಕಾಶ್*

### ಗೌಡ ಸಾರಸ್ವತ ಸಮಾಜದಿಂದ ಗಣೇಶೋತ್ಸವ

ಗೌಡ ಸಾರಸ್ವತ ಸಮಾಜದ ವತಿಯಿಂದ ನವದೆಹಲಿಯ ರಾಜೇಂದ್ರ ನಗರದಲ್ಲಿ ಗಣೇಶೋತ್ಸವವು ನಡೆಯಿತು.





ದೆಹಲಿ ಕನ್ನಡ ಲೇಡೀಸ್ ಅಸೋಸಿ-ಯೇಶನ್ ವತಿಯಿಂದ ಗಣೇಶೋತ್ಸವ ಆಚರಣೆ



### ರಾಷ್ಟ್ರಪತಿ ಭವನದಲ್ಲಿ ಸ್ವಪ್ನಾ ಅತ್ತಾವರ ನೃತ್ಯ ಪ್ರದರ್ಶನ

ಶ್ರೀ ಅನಿಲ್ ಅತ್ತಾವರ ಅವರ ಸುಪುತ್ರಿ ಸ್ವಪ್ನಾ ಅತ್ತಾವರ ಅವರು ಎಬಿಲಿಟಿ ಅನ್‌ಲಿಮಿಟೆಡ್ ಫೌಂಡೇಶನ್ ಅವರ ತಂಡದೊಂದಿಗೆ ರಾಷ್ಟ್ರಪತಿ ಭವನದಲ್ಲಿ ಸೆಪ್ಟೆಂಬರ್ 21ರಂದು ನೃತ್ಯ ಪ್ರದರ್ಶನ ಮಾಡಿದರು.

## ಓದುಗರ ಪತ್ರ

ಸಂಪಾದಕರಿಗೆ,
ದೆಹಲಿ ಕರ್ನಾಟಕ ಸಂಘದ ಹೊಸ ಕಾರ್ಯಕಾರಿ ಸಮಿತಿಯ ತಂಡಕ್ಕೆ ನನ್ನ ಅಭಿನಂದನೆಗಳು. ಮುಂಬರುವ ವರುಷಗಳಲ್ಲಿ ಕನ್ನಡ ನಾಡು ನುಡಿಗಳ ಮತ್ತು ಸಂಸ್ಕೃತಿಯ ಪ್ರಸಾರದಲ್ಲಿ ಸಂಘದ ಕಾರ್ಯಕ್ರಮಗಳು ಮಾದರಿಯಾಗಲಿ ಎಂದು ಹಾರೈಸುವೆ.

ಸೆಪ್ಟೆಂಬರ್ 2013ರ ಅಭಿಮತ ಸಂಚಿಕೆ ಕೈ ಸೇರಿದೆ. ಮೊದಲೇ ಸುಂದರವಾಗಿ ಬರುತ್ತಿದ್ದ ಪತ್ರಿಕೆ ಇದೀಗ ಮೂವರ ಉಸ್ತುವಾರಿಯಲ್ಲಿ ಇನ್ನಷ್ಟು ಸುಂದರವಾಗಿ, ವಿಷಯ ವೈವಿಧ್ಯಗಳಿಂದ ಕೂಡಿದುದಲ್ಲದೆ, ನಯನಗಳಿಗೆ ಮತ್ತಷ್ಟು ಮುದ ನೀಡುವ ವಿನ್ಯಾಸ ಕಂಡು ಖುಷಿಯಾಯಿತು. ಇದು ಹೀಗೆಯೇ ಮುಂದುವರಿಯಲಿ.

ಪತ್ರಿಕೆಯ ಸಂಪಾದಕತ್ರಯರಿಗೆ ಮತ್ತು ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳಿಗೆ ನೆನಪು ನಮನಗಳು. ಅ

***ಕೃಷ್ಣ ಕೊಲ್ಹಾರ ಕುಲಕರ್ಣಿ, ಬಿಜಾಪುರ***

ಸಂಪಾದಕರಿಗೆ,
ಅಭಿಮತದ ಸೆಪ್ಟೆಂಬರ್ 2013ರ ಸಂಚಿಕೆ ಕನ್ನಡಿಗರ ಅಭಿಲಾಷೆಯ ಕೂಸಾಗಿ ಅತ್ಯದ್ಭುತ, ಅತ್ಯಾಕರ್ಷಕ ಹಾಗೂ ಅತ್ಯುತ್ತಮವಾಗಿ ಬಂದಿದೆ.

ನಾನು ತಮ್ಮ ಸಂಘದ ಸಂಪರ್ಕವಾದಾಗಿನಿಂದ ಇದುವರೆಗೂ ಇಷ್ಟು ವಿಭಿನ್ನವಾದ ಅಭಿಮತದ ಸಂಚಿಕೆಯನ್ನು ಕಂಡಿಲ್ಲ. ನೂರರ ಸಂಭ್ರಮದಲ್ಲಿ ಪ್ರೊ. ಜಿ. ವೆಂಕಟಸುಬ್ಬಯ್ಯನವರ ಸಂಪೂರ್ಣ ಚಿತ್ರಣ, ಕೆಂಪುಕೋಟೆಯ ನಾಡಿನಲ್ಲಿ ಕನ್ನಡಿಗರ ಸ್ವಾತಂತ್ರ್ಯೋತ್ಸವದ ಸಂಭ್ರಮ, ರಾಜಧಾನಿಯಲ್ಲಿ ಇನ್ನಷ್ಟು ಕನ್ನಡಿಗರನ್ನು ಒಟ್ಟುಗೂಡಿಸಲು ಕರೆನೀಡಿದ ಬಸವಪ್ರಭು ಎಸ್. ಪಾಟೀಲರ ಕರೆ ಮುಂತಾದ ಬರಹಗಳು ಬಹಳಷ್ಟು ಇಷ್ಟವಾದವು.

ದೆಹಲಿಗೆ ಬಂದಾಗ ಆತ್ಮೀಯತೆಯಿಂದ ಬರಮಾಡಿಕೊಳ್ಳುವ ಗೆಳೆಯರನ್ನು ನೆನೆಯುತ್ತಿರುವೆನು. ಅ

***ಕೆ.ಸಿ. ಶಿವ ಕುಮಾರ್, 'ಜನಪದರು', ಹೊಸಕೋಟೆ***

ಕರ್ನಾಟಕ ಸರ್ಕಾರ
ವಾರ್ತಾ ಇಲಾಖೆ
ಕರ್ನಾಟಕ ವಾರ್ತಾ ಕೇಂದ್ರ, ನವದೆಹಲಿ
ಹಾಗೂ
ದೆಹಲಿ ಕರ್ನಾಟಕ ಸಂಘ, ನವದೆಹಲಿ
ಇವರ ಸಂಯುಕ್ತ ಆಶ್ರಯದಲ್ಲಿ
ಕನ್ನಡ ಚಲನಚಿತ್ರ ಪ್ರದರ್ಶನ
**ಸ್ಥಳ: ದೆಹಲಿ ಕರ್ನಾಟಕ ಸಂಘದ ಸಭಾಂಗಣ**
**ರಾವ್ ತುಲಾರಾಂ ಮಾರ್ಗ್, ಸೆಕ್ಟರ್-12, ಆರ್.ಕೆ. ಪುರಂ, ನವದೆಹಲಿ- 110022**




**ದಿನಾಂಕ : 13.10.2013ರ ಭಾನುವಾರ**
**ಸಂಜೆ : 5.00 ಗಂಟೆಗೆ**
ರೆಬೆಲ್ ಸ್ಟಾರ್ ಅಂಬರೀಶ್ ಹಾಗೂ ಸುದೀಪ್
ಅಭಿನಯದ

## ವೀರ ಪರಂಪರೆ

ನಿರ್ದೇಶನ : ಎಸ್. ನಾರಾಯಣ್

ನೀವೂ ಬನ್ನಿ, ನಿಮ್ಮ ಕುಟುಂಬದವರು ಮತ್ತು ಸ್ನೇಹಿತರನ್ನೂ ಕರೆತನ್ನಿ!

ಉಪ ನಿರ್ದೇಶಕರು
ಕರ್ನಾಟಕ ವಾರ್ತಾ ಕೇಂದ್ರ
ಕರ್ನಾಟಕ ಭವನ-2, ನಂ. 6. ಸರ್ದಾರ್ ಪಟೇಲ್ ಮಾರ್ಗ್
ಚಾಣಕ್ಯಪುರಿ, ನವದೆಹಲಿ- 110021.
ದೂರವಾಣಿ: 011-24102263, ಮೊಬೈಲ್: +91 99686 52139


# Saujanya Printing Press

A HOUSE OF QUALITY PRINTING

C-95, Okhla Industrial Area, Phase-I
New Delhi-110020
Tel: 40520770
Mobile : 9811104398, 9811604398
E-mail : saujanyapp2010@gmail.com / hpgp2006@gmail.com

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ
ಬಹುವರ್ಣದ ಸುಸಜ್ಜಿತ ಮುದ್ರಣಾಲಯ

**ಸೌಜನ್ಯ ಪ್ರಿಂಟಿಂಗ್ ಪ್ರೆಸ್** ಮತ್ತು **ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್**

ನಾವು ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡುತ್ತೇವೆ.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು, ಬೈಂಡಿಂಗ್ ಕೆಲಸಗಳಿಗಾಗಿ ನಮ್ಮನ್ನು ದಯವಿಟ್ಟು ಸಂಪರ್ಕಿಸಿರಿ.

ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ

## ಕನಸಿನಾ ಲೋಕ

ವಿಹರಿಸುತ ಕನಸಿನಾ ಲೋಕದಲಿ
ಕುಳಿತಾಗ ಮನೆಯಂಗಳದಲಿ
ನಗುವ ಸುಂದರ ಚಂದಿರನ ಬೆಳಕಲಿ
ಕಂಡೆ ಸುಂದರ ಕನಸೊಂದ ಮನದಲಿ ॥


ಪೌರ್ಣಿಮೆಯ ದಿನದಲಿ
ಪೂರ್ಣ ಚಂದಿರನ ತಂಪಿನಲಿ
ಮಲ್ಲಿಗೆ ಮುಡಿದ ನಲ್ಲೆಯ ತೋಳಿನಲಿ
ಮುಳುಗಿದ್ದೆ ಅದ್ಭುತ ಆನಂದದಲಿ॥

ನಲ್ಲೆಯ ಸವಿ ನುಡಿಯ ಕೇಳುತಲಿ
ಮುಂಗುರಳ ನೇವರಿಸುತಲಿ
ತುಂಬು ಗಲ್ಲಗಳ ಸವರುತಲಿ
ಸಿಂಗರಿಸಿದ್ದೆ ಮುತ್ತಿನ ಸರ ಮಾಲೆಯಲಿ ॥

ತೇಲಿ ಹೋದಾಗ ಸರಸದಲಿ
ಎಚ್ಚರಿಸಿತಿನ್ನೊಂದು ಮನ ಎಚ್ಚರ ಇರಲಿ
ಸರಸದಾ ಸಮಯದಲಿ
ಹೋದಾಳು ಪ್ರೇಯಸಿ ಬಿಟ್ಟು ದೂರದಲಿ ॥

ಕೋಟಿ ದೇವತೆಗಳ ನೆನೆಯುತಲಿ
ಮನ ಬೇಡಿತೊಂದು ಕ್ಷಣದಲಿ
ಯಾವ ಕಾಲಕ್ಕೂ ದೂರಾಗದಿರಲಿ
ದೂರಾದರೆ ಸಹಿಸುವ ಶಕ್ತಿ ಇನ್ನೆಲ್ಲಿ?

***ಶಶಿಧರ ಮುನವಳ್ಳಿ***





## ಬರಿದಾದ ಒಡಲು

ಬರೆಯಲೆಂತು ಹೆತ್ತ
ಕರುಳಿನ ನೋವ
ಹೊತ್ತು ನವ ಮಾಸ
ತಿಂದು ಸಹಿಸಿದ ನೋವ ॥

ಮರೆಯಬಹುದಿತ್ತು ಕಂದ
ಆಡಿದೋಳ್ ಬಂದು ಮಡಿಲಿಗೆ
ತಾಯ ಗರ್ಭದ ಸ್ವರ್ಗವೇ
ಸಾಕೆಂದು ಬಾರದೇ ಹೊರಗೆ
ಹಿಂದಿರುಗುತಾ ಕಂದ ಮರಳಿ ಮಣ್ಣಿಗೆ

ಕಟ್ಟಿತ್ತ ಕನಸೊಂದು
ತಾಯಿಯ ಪರಿವಾರ
ಬಿತ್ತೊಂದು ಕರಿ ನೆರಳು
ಕಾಣದೇ ಪರಿಹಾರ
ತಡಬಡಿಸಿ ಹರಿಸಿದರು ಕೋಡಿ ಕಣ್ಣೀರ

ಬಂತೆಂದು ಹಬ್ಬ
ನಡೆದಿತ್ತು ಸಂಬ್ರಮ

ಸುದ್ದಿ ತಿಳಿದಾಗ
ಆಗಿತ್ತು ದಿಗ್ಭ್ರಮೆ
ಕವಿದಾಯ್ತು ಮಸಣ ಮೌನ
ಕೇಳದೇ ಕಂದನ ರೋದನ

***ಶಶಿಧರ ಮುನವಳ್ಳಿ***



## ಕನಸೊಂದಿತ್ತು

ದೂರ ದಿಗಂತವದು ಕನಸೊಳಗಿತ್ತು
ತನು ಹನಿಗರೆಯದೆ ತಳಿರೊಡೆದಿತ್ತು
ನವಿರಳಿಯದ ಹೂ ಒಡಲಲಿ ಅರಳಿ
ಕನಸೊಂದಿತ್ತು

ನೆನಪಲೆ ನಡೆದೆ ನೆರಳೆನಿಸಿತ್ತು
ನುಣುಪು ಹುರುಪು ಇಮ್ಮಡಿಸಿತ್ತು
ತಳಮಳಕೆ ತಾಳ್ಮೆಗೆ ಎಸಳೆರಡಿಟ್ಟು
ಕನಸೊಂದಿತ್ತು

ಕವಿತೆಯ ಕಟ್ಟಿ ಕಣ್ಣಿಗೆ ನೆಟ್ಟಿ
ಜನಮನ ಸ್ವರದಲ್ಲಿ ಭೀತಿಯ ಮೆಟ್ಟಿ
ಸ್ಫೂರ್ತಿಯ ತಳೆವ ಸೆಲೆ ಸಿರಿ ಸುರಿವ
ಕನಸೊಂದಿತ್ತು

ಕವಿಪರಿ ಜ್ವರವ ಜನರೊಳಗಿಟ್ಟು
ಜನಮನ ಸ್ಥಿತಿಯನ್ನು ಕವಿತೆಯಲಿಟ್ಟು
ಕವಿ ಜನ ಹೃದಯದ ಬಡಿತವ ಬೆಸೆವ
ಕನಸೊಂದಿತ್ತು

ಕಲ್ಪನೆ ಕಾಮನೆ ಸೃಷ್ಟಿಯಲಿಳಿಸಿ
ಸೊಗಸಿನ, ಸೆರಗನು ಬಳುವಳಿಗೊಳಿಸಿ
ಕವಿತೆಯ ಬರೆವ ಮನವನು ತಳೆವ
ಕನಸೊಂದಿತ್ತು

***ತೇಜಸ್ವಿ (ಆಶೋಕ ಕೆ)***
***ಜೆ.ಎನ್.ಯು, ನವದೆಹಲಿ***

ದೆಹಲಿಯ ಕರ್ನಾಟಕ ಭವನದಲ್ಲಿ ಸಹಾಯಕ ಸಮನ್ವಯಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರುವ **ಶಶಿಧರ ಮುನವಳ್ಳಿ** ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಕಮತಗಿ ಎಂಬ ಹಳ್ಳಿಯಲ್ಲಿ ಜನಿಸಿ ಬಾಗಲಕೋಟೆ ಮತ್ತು ಬೆಂಗಳೂರಲ್ಲಿ ಶಿಕ್ಷಣ ಪಡೆದಿದ್ದಾರೆ. ರಂಗಭೂಮಿ ಅವರ ಇನ್ನೊಂದು ಆಸಕ್ತಿ ಕ್ಷೇತ್ರ.

ಕಥೆ

# ಅಪ್ಪನಿಗೊಂದು ಪತ್ರ




ಮೂಲ ಹಿಂದಿ ಸುಶಾಂತ ಸುಪ್ರಿಯ, ಕನ್ನಡಕ್ಕೆ  ಚಂದ್ರಶೇಖರ ಎನ್. ಪಿ.

ಅಪ್ಪಾಜಿಯವರಿಗೆ ನಮಸ್ಕಾರಗಳು.

ನನ್ನ ನಲವತ್ತನೇ ಹುಟ್ಟುಹಬ್ಬಕ್ಕೆ ನೀವು ಕಳಿಸಿದ ಶುಭಾಶಯ ಪತ್ರ ತಲುಪಿದೆ. ಎಪ್ಪತ್ತನೆಯ ವಯಸ್ಸಿನಲ್ಲೂ ನಿಮ್ಮ ಕೈಬರಹ ಮೊದಲಿದ್ದಂತೆಯೇ ಇದೆ. ನಿಮ್ಮ ಅಕ್ಷರಗಳು ಮುತ್ತು ಪೋಣಿಸಿದಂತೆ ಅಂದವಾಗಿ ಕಾಣುತ್ತವೆ. ನೀವು ಬರೆದಿರುವ ಎಲ್ಲ ಪತ್ರಗಳನ್ನು ನಾನು ನನ್ನ ಪೆಟ್ಟಿಗೆಯಲ್ಲಿ ಜೋಪಾನವಾಗಿ ಇಟ್ಟಿದ್ದೇನೆ. ಈ ಪತ್ರಗಳು ನನಗೆ ನನಗೆ ನಿಮ್ಮಿಂದ ಬಂದ ಬಳುವಳಿ. ಬರೇ ಯಾಂತ್ರಿಕತೆ ತುಂಬಿದ ಈ ಬದುಕಿನಲ್ಲಿ ಬೇಸರವಾದಾಗ ಅಂತೆಯೇ ಒಂಟಿತನ ಕಾಡಿದಾಗ ಈ ಪತ್ರಗಳನ್ನು ಓದುತ್ತಾ ಅವೆಲ್ಲವನ್ನೂ ಮರೆಯುತ್ತೇನೆ. ಅವುಗಳನ್ನು ಓದುವಾಗ ಮನಸ್ಸಿಗೆ ಬಹಳಷ್ಟು ಆನಂದ ಉಂಟಾಗುತ್ತದೆ.

ಅಪ್ಪಾಜಿ, ಇಷ್ಟು ವಯಸ್ಸಾದ ಮೇಲೂ ಯಾವಾಗಲಾದರೂ ಒಮ್ಮೊಮ್ಮೆ ನಮ್ಮ ಹಿಂದಣ ಬದುಕನ್ನು ಮೆಲುಕು ಹಾಕೋದರಿಂದ ಏನೋ ಒಂದು ತರಾ ಮುದ ಸಿಗುತ್ತದೆ. ಇವತ್ತು ನಾನು ನಿಮಗೊಂದು ವಿಷಯ ಹೇಳಬೇಕು, ಬಹಳಷ್ಟು ವಿಷಯಗಳ ಬಗ್ಗೆ ನಿಮ್ಮ ಜೊತೆ ಮಾತನಾಡಬೇಕು ಅಂತ ಮನಸ್ಸಾಗ್ತಿದೆ. ಇವತ್ತಿನವರೆಗೆ ನಾವು ಯೋಚನೆ ಮಾಡದೆ ಇರುವ ಹಲವಾರು ವಿಷಯಗಳಿವೆ. ಅವುಗಳನ್ನೆಲ್ಲಾ ನಾನು ನಿಮಗೆ ಹೇಳಬೇಕು ಅಂತ ಆಸೆಯಾಗ್ತಿದೆ.

ಅಪ್ಪಾಜಿ, ನಾನು ನಿಮ್ಮ ಮಗನಾಗಿ ಹುಟ್ಟಿರುವುದು ನನಗೆ ಯಾವಾಗಲೂ ಹೆಮ್ಮೆ ಅಂತನಿಸುತ್ತೆ. ನಾನು ಚಿಕ್ಕವನಿದ್ದಾಗಲೇ ನೀವು ನನ್ನ ಭವಿಷ್ಯಕ್ಕೆ ಒಳ್ಳೆಯ ಬುನಾದಿ ಹಾಕಿಕೊಟ್ಟಿರಿ. ದೊಡ್ಡವನಾದ ಮೇಲೆ ನನಗೆ ಬೇಕಾದುದನ್ನೆಲ್ಲಾ ಕೊಡಿಸಿದಿರಿ. ನನಗೆ ಫ್ಯಾನ್ ತೆಗೆದುಕೊಟ್ಟಿರಿ. ನನ್ನ ಬದುಕಿನ ಬಗ್ಗೆ ಸ್ವತ: ನಾನೇ ಕನಸುಗಳನ್ನು ಕಟ್ಟಿಕೊಳ್ಳಬೇಕೇ ಹೊರತು ಬೇರೆಯವರು ಕಟ್ಟಿದ ಕನಸುಗಳಿಗಾಗಿ ಬದುಕಬಾರದು ಎಂದು ನನಗೆ ಸ್ಫೂರ್ತಿ ನೀಡಿದಿರಿ. ನಾನು ನನ್ನ ಬದುಕಿನ ದಾರಿಯನ್ನು ರೂಪಿಸಿಕೊಳ್ಳುವಾಗ ನನಗೆ ಪ್ರೇರಣೆ ನೀಡಿದಿರಿ. ನನ್ನ ಗುರಿ ಸಾಧನೆ ಮಾಡುತ್ತಾ ಮುನ್ನಡೆದಾಗಲೆಲ್ಲಾ ನನ್ನನ್ನು ಹುರಿದುಂಬಿಸಿ ಇನ್ನೂ ಎತ್ತರಕ್ಕೇರುವಂತೆ ಭರವಸೆ ತುಂಬಿದಿರಿ. ನನ್ನ ಒಳಗಿನ ಕೂಗಿಗೆ ಕಿವಿಗೊಡುವುದನ್ನು ಕಲಿಸಿದಿರಿ. ದಿನಾಲು ಬೆಳಿಗ್ಗೆ ಎದ್ದಾಕ್ಷಣ ಏನಾದರೊಂದು ಖುಷಿ ನೀಡಿ ಬೆಳಗಿನಿಂದ ಸಂಜೆವರೆಗೂ ನಗುನಗುತ್ತಾ ಉತ್ಸಾಹದಿಂದ ಇರುವಂತೆ ಮಾಡುತ್ತಿದ್ದಿರಿ. ಕಷ್ಟಗಳು ಎಷ್ಟೇ ಇದ್ದರೂ ಅದನ್ನು ಮೀರಿ ಬದುಕಲು ಕಲಿತವರಿಗೆ ಜಗತ್ತು ಸುಂದರತಾಣ ಎಂಬುದನ್ನು ತೋರಿಸಿಕೊಟ್ಟಿರಿ.



ನೀವು ನನಗೆ ನನ್ನ ಬಾಲ್ಯದ ಎಲ್ಲ ಚಿಕ್ಕ ಪುಟ್ಟ ಆನಂದಗಳನ್ನೂ ಕೊಟ್ಟಿದ್ದೀರಿ. ನನಗೆ ನೆನಪಿದೆ ಏನೆಂದರೆ ಒಬ್ಬ  ಹುಡುಗ ಮಿಠಾಯಿ ಅಂಗಡಿ ಮುಂದೆ ನಿಂತುಕೊಂಡು ಬಿಸಿ ಬಿಸಿ ಮಿಠಾಯಿ ತಿನ್ನುತ್ತಾ ಇದ್ದ. ಪ್ರತಿ ಭಾನುವಾರ ರಾಮಭಾಗ್‌ದಲ್ಲಿ ಬಲೂನುಗಳನ್ನು ಹಾರಾಡಿಸುತ್ತಿದ್ದ, ಉಯ್ಯಾಲೆ ಆಡುತ್ತಿದ್ದ, ಚಿಟ್ಟೆಗಳನ್ನು ಹಿಡಿಯುತ್ತಿದ್ದ. ಕಾಮನಬಿಲ್ಲನ್ನು ಕಂಡು ರೋಮಾಂಚನಗೊಳ್ಳುತ್ತಿದ್ದ. ಗೂಡುಗಳಿಂದ ಬರುತ್ತಿದ್ದ ಹಕ್ಕಿಗಳ ಚಿಂವ್ ಚಿಂವ್‌ಗುಟ್ಟುವಿಕೆಯನ್ನು ಕೇಳಿ ಆನಂದಿಸುತ್ತಿದ್ದ. ಗಾಳಿಪಟ ಹಾರಾಡಿಸುತ್ತಿದ್ದ. ಗೋಲಿ ಆಡುತ್ತಿದ್ದ, ಮಿಂಚುಹುಳುಗಳನ್ನು ಹಿಡಿಯಲು ಓಡುತ್ತಿದ್ದ. ಪಾರಿವಾಳಗಳಿಗೆ ತಿನ್ನಲು ಕಾಳುಗಳನ್ನು ಹಾಕುತ್ತಿದ್ದ. ಹೂ ಗಿಡಗಳನ್ನು ತುಂಬಾ ಜೋಪಾನವಾಗಿ ಮುಟ್ಟಿ ಹೂ ಕೀಳುತ್ತಿದ್ದ. ನಾಯಿ ಮರಿಗಳಂತೆ ಬೌ ಬೌ ಗುಟ್ಟುತ್ತಿದ್ದ. ಬೆಕ್ಕಿನ ಮರಿಯಂತೆ ಮಿಯಾಂವ್, ಮಿಯಾಂವ್ ಗುಟ್ಟುತ್ತಿದ್ದ. ಅವನ ಅಪ್ಪ, ಅವನ ಓರಗೆಯವನಂತೆಯೇ ಸದಾ ಜೊತೆಯಲ್ಲಿದ್ದು ಅವನ ಖುಷಿಗಳಲ್ಲಿ ನೆರವಾಗುತ್ತಿದ್ದ. ಪ್ರತಿದಿನ ಬೆಳಿಗ್ಗೆ ಎದ್ದು ಕ್ಯಾಂಪಸಿನ ಆವರಣದಲ್ಲಿ ವಾಯುವಿಹಾರಕ್ಕೆ ಹೋಗುತ್ತಿದ್ದ. ರಜಾದಿನಗಳಲ್ಲಿ ಹೊಲಗದ್ದೆಗಳಲ್ಲಿ ಹೋಗಿ ಕೆಲಸ ಮಾಡುತ್ತಿದ್ದ. ಅವನ ಜೊತೆಯಲ್ಲಿ ಆಲೂಗೆಡ್ಡೆ, ಮೂಲಂಗಿ, ಟೊಮೆಟೊ, ಕೋಸು, ಹಸಿ ಮೆಣಸಿನಕಾಯಿ, ಮುಂತಾದ  ತರಕಾರಿಗಳನ್ನು ಬೆಳೆಸುತ್ತಿದ್ದ. ಅಂತೆಯೇ ತಾನೂ ಕೂಡ ಬೆಳೆದು ದೊಡ್ಡವನಾದ.

ಅಪ್ಪಾಜಿ ನಿಮ್ಮ ಮೊಮ್ಮಗ ಈಗ ದೊಡ್ಡವನಾಗಿದ್ದಾನೆ. ನಿನ್ನೆ ದಿವಸ ನಿಮ್ಮ ಇಮೇಲ್ ಅಕೌಂಟ್ ಕೊಡುವಂತೆ ಕೇಳಿದ. ಅವನ ತಾತನ ಜೊತೆ ಇಂಟರ್‌ನೆಟ್ ನಲ್ಲಿ ಚಾಟ್ ಮಾಡಲಿಕ್ಕೆ ಇಷ್ಟಪಡ್ತಾನೆ. ತಾತನ ಹತ್ತಿರ ಕಂಪ್ಯೂಟರ್ ಇಲ್ಲ ಅಂತ ನಾನು ಹೇಳಿದ್ದಕ್ಕೆ ತುಂಬಾ ಬೇಜಾರು ಮಾಡಿಕೊಂಡ.

ಅಪ್ಪಾಜಿ, ನಾನು ಬಾಲ್ಯದಲ್ಲಿ ಅನುಭವಿಸಿದ ಎಲ್ಲ ಚಿಕ್ಕ ಪುಟ್ಟ ಖುಷಿಗಳು ನನ್ನ ಮಗನಿಗೂ ಸಿಗೋ ಹಾಗೆ ಮಾಡಬೇಕು ಅಂತ ನನಗೆ ಆಸೆ. ಅವನಿಗೆ ಈಗ ಹತ್ತು ವರ್ಷವಾಯಿತು. ಆದರೆ ಇವತ್ತಿನ ವರೆಗೆ ಅವನಿಗೆ ಗಾಳಿಪಟ ಹಾರಿಸೋದು ಗೊತ್ತಿಲ್ಲ. ಗಿಲ್ಲಿದಾಂಡ್ ಆಡೋದು ಗೊತ್ತಿಲ್ಲ, ಗೋಲಿ ಆಡೋಕೆ ಬರೋದಿಲ್ಲ!  ಮಾವಿನ ಮರ, ನೇರಳೆ ಮರ ಹತ್ತೋದು ಬರೋದಿಲ್ಲ. ನದೀ ದಡದಲ್ಲಿ ಕುಳಿತುಕೊಂಡು ಬಕರೆ ಚೂರುಗಳನ್ನು ಆಯ್ದು ನೀರಿನ ಮೇಲೆ ಸೊಂಯ್ ಅಂತ ದೂರದವರೆಗೆ ಹೊಡೆಯೋ ಆಟ ಆಡಲಿಲ್ಲ. ಅವನು ಈ ಆಟಗಳನ್ನೆಲ್ಲ ಆಡುತ್ತಾ ಖುಷಿ ಪಡಬೇಕು ಅಂತ ನನಗೆ ಆಸೆ. ಆದರೆ ಅವನ ಬಾಲ್ಯವೆಲ್ಲ ಏನೂ ಮಾಡದೆ ಕಾಲ ವ್ಯರ್ಥ ಆಯ್ತು ಅಂತ ಅಲ್ಲ. ಅವನು ಹೊಸ ಪೀಳಿಗೆಯ ಹುಡುಗ. ಅವನಿಗೆ ಕಂಪ್ಯೂಟರ್ ಗೇಮ್ಸ್ ಅಂದರೆ ತುಂಬಾ ಇಷ್ಟ.  ಟಿ.ವಿ. ನೋಡ್ತಾ ನೋಡ್ತಾ ಬೆಳೆದವನು ಅವನು. ಅವನಿಗೆ ಮೊಬೈಲ್ ಫೋನ್ನಲ್ಲಿ ಮಾತನಾಡಬೇಕು, ಶೋಕಿ ಮಾಡಬೇಕು ಅನ್ನೋ ಆಸೆ. ಕಾರ್ಟೂನ್ ಚಾನೆಲ್ ನೋಡೋ ಹಂಬಲ. ಅವನಿಗೆ ಬರ್ಗರ್, ಫಿಂಗರ್‌ಚಿಪ್ಸ್, ಪಿಜ್ಜಾ ತಿನ್ನೋದು ಅಂದರೆ ಬಹಳ ಇಷ್ಟ. ಒಂದರಿಂದ ನೂರರವರೆಗೆ ಮಗ್ಗಿ ಹೇಳೋದು ಅವನಿಗೆ 'ಡಿಫಿಕಲ್ಟ್' ಆಗುತ್ತಂತೆ, ಅಲ್ಲದೆ 'ಆರು'



ಮತ್ತು 'ಒಂಭತ್ತು' ಅವನಿಗೆ 'ಕನ್‌ಫ್ಯೂಸ್' ಆಗುತ್ತವಂತೆ. ಅವನಿಗೆ 'ಇಂಪೋರ್ಟೆಡ್' ವಸ್ತುಗಳು ಮಾತ್ರ ಬೇಕಂತೆ.

ಅಪ್ಪಾಜಿ ನಿಮಗೆ ನೆನಪಿದೆಯಾ?, ನನಗೆ ತಾತನನ್ನು ಕಂಡರೆ ತುಂಬಾ ಇಷ್ಟ ಅಂತ ನೀವು ಒಂದ್ಸಲ ಬೇಸಿಗೆ ರಜೆಯಲ್ಲಿ ನನ್ನನ್ನು ಊರಿಗೆ ಕರ್ಕೊಂಡು ಹೋಗಿ ತಾತನ ಹತ್ತಿರ ಬಿಟ್ಟುಬಂದಿದ್ದಿರಿ. ಆಗ ನಾನು ತಾತನ ಜೊತೆ ನದಿಯಲ್ಲಿ ಮೀನು ಹಿಡೀಲಿಕ್ಕೆ ಹೋಗ್ತಾ ಇದ್ದೆ. ತಾತ ತುಂಬಾ ಚೆನ್ನಾಗಿ ಕೊಳಲನ್ನು ನುಡಿಸುತ್ತಾ ಇದ್ದರು. ಆನಂದದಿಂದ ಕೊಳಲನ್ನು ನುಡಿಸುತ್ತಾ ಇದ್ದ ತಾತನ ಮುಖ ನನಗೆ ಇನ್ನು ಚೆನ್ನಾಗಿ ನೆನಪಿದೆ.

"ಅಪ್ಪಾ ಕೊಳಲಿಗೆ ಇಂಗ್ಲಿಷಿನಲ್ಲಿ ಏನಂತಾರೆ? ಅಪ್ಪಾ ಹಳ್ಳಿ ಅಂದರೆ ಹೇಗಿರುತ್ತೆ? ಗಿಲ್ಲಿ ದಾಂಡ್‌ಗೆ ಇಂಗ್ಲಿಷಿನಲ್ಲಿ ಏನಂತಾರೆ?" ನಾನು ಕೇಳಿ ಆನಂದಿಸ್ತಾ ಇದ್ದೆ. "ತಿತಲಿಗೆ ಇಂಗ್ಲಿಷಿನಲ್ಲಿ ಏನಂತಾರೆ?" ಹೀಗೆ ಪಕ್ಕದಲ್ಲಿ ಕುಳಿತುಕೊಂಡು ನನ್ನ ಪತ್ರ ಓದುತ್ತಾ ಇದ್ದ ಮಗ ನನ್ನನ್ನು ಪ್ರಶ್ನೆ ಕೇಳ್ತಾ ಇದ್ದಾನೆ. ಅಪ್ಪಾಜಿ, ಇವಕ್ಕೆಲ್ಲಾ ನಾನು ಅವನಿಗೆ ಇಂಗ್ಲಿಷಿನಲ್ಲಿ ಉತ್ತರ ಹೇಳಬೇಕಾಗಿದೆ.

ಊರಿನಲ್ಲಿರುವಾಗ ಒಂದು ಸಲ ನದಿ ಹತ್ತಿರ ಮೀನು ಹಿಡಿಯುತ್ತಾ ಇರೋವಾಗ ನಾನು ತಾತನನ್ನು "ಯಾವಾಗಲಾದರೂ ಭೂತವನ್ನು ನೋಡಿದ್ದೀರಾ ತಾತ?" ಎಂದು ಕೇಳಿದೆ. ನನ್ನ ಪ್ರಶ್ನೆಗೆ ತಾತ ನಗುತ್ತಾ ಇದ್ದರು.

"ತಾತ ನೀವೂ ಭೂತಕ್ಕೆ ಹೆದರುಕೊಳ್ಳುತ್ತೀರಾ?" ಅಂತ ಕೇಳಿದೆ.

"ಭೂತಕ್ಕೆ ಅಲ್ಲ ಕೆಟ್ಟ ಜನಗಳಿಗೆ ಹೆದರುಕೋಬೇಕು" ಅಂದರು ತಾತ.

"ಆದರೆ ನನ್ನ ಗೆಳೆಯ ಹೇಳ್ತಾ ಇದ್ದ ಭೂತ ಭಯಾನಕವಾಗಿರುತ್ತಂತೆ?" ಎಂದು ಕೇಳಿ ನನಗಿದ್ದ ಸಂಶಯವನ್ನು ಹೊರಹಾಕಿದೆ.

"ಕೆಟ್ಟ ಜನಗಳು ಭೂತಕ್ಕಿಂತ ಭಯಾನಕವಾಗಿರುತ್ತಾರೆ" ಅಂತ ನನ್ನ ಭುಜದ ಮೇಲೆ ಕೈಯಿಟ್ಟುಕೊಂಡು ಮಾತನಾಡ್ತಾ ಇದ್ದರು.

"ತಾತಾ ಕೆಟ್ಟ ಜನಗಳು ಏನ್ ಮಾಡ್ತಾರೆ?" ಎಂಬ ನನ್ನ ಜಿಜ್ಞಾಸೆಯನ್ನು ವ್ಯಕ್ತ ಪಡಿಸಿದೆ.

"ಕೆಟ್ಟ ಜನ ಮರಗಳನ್ನು ಕಡಿಯುತ್ತಾರೆ, ಕಾಡನ್ನು ನಾಶ ಮಾಡುತ್ತಾರೆ. ನದೀ ಕೆರೆ ಕಟ್ಟೆಗಳ ನೀರನ್ನು ಮಲಿನಗೊಳಿಸುತ್ತಾರೆ, ಅವುಗಳಿರುವ ಜಾಗವನ್ನು ಅತಿಕ್ರಮಿಸಿಕೊಳ್ಳುತ್ತಾರೆ. ಮನುಷ್ಯರಿಗೆ, ಪ್ರಾಣಿ ಪಕ್ಷಿಗಳಿಗೆ ಜೀವಹಿಂಸೆ ನೀಡುತ್ತಾರೆ." ಹೀಗೆ ಹೇಳ್ತಾ ಇದ್ದ ತಾತನ ಮುಖದಲ್ಲಿ ಗಂಭೀರತೆ ಎದ್ದು ಕಾಣತ್ತಿತ್ತು.

ತಾತನ ಗಂಭೀರವಾಗಿದ್ದ ಮುಖವನ್ನು ನೋಡಿ ಕೋಪ ಬಂದು "ತಾತಾ ನಾನು ದೊಡ್ಡವನಾದ ಮೇಲೆ ಆ ಎಲ್ಲ ಕೆಟ್ಟ ಜನರನ್ನು ಹೊಡೆದು ಹಾಕ್ತೀನಿ" ಅಂತ ಹೇಳಿದೆ. ಏಕೆಂದರೆ ತಾತನ ಮುಖ ಗಂಭೀರವಾಗಿದ್ದನ್ನು ನೋಡಲಿಕ್ಕೆ ನನಗೆ ಆಗ್ತಾ ಇರಲಿಲ್ಲ. ಅವರು ಯಾವಾಗಲೂ ನಗು ನಗುತ್ತಾ ಇದ್ದೇರೇನೆ ನನಗೆ ಚೆಂದ.

"ಮಗೂ ಕೆಟ್ಟ ಜನರನ್ನಲ್ಲ, ಅವರಲ್ಲಿರುವ ಕೆಟ್ಟ ಗುಣಗಳನ್ನು ಹೊಡೆದೋಡಿಸಬೇಕು" ಅಂತ ನನ್ನ ಬೆನ್ನನ್ನು ತಟ್ಟುತ್ತಾ ನಾನು ಆಡಿದ ಮಾತುಗಳನ್ನು ಕೇಳಿ ನಗುತ್ತಾ ಹೇಳಿದರು.

"ಮಗೂ ಹಾಲು ಕುಡೀ... ತಗೋ" ಅಂತ ನಿಮ್ಮ ಸೊಸೆ ಅಡುಗೆ ಮನೆಯಿಂದ ಮೊಮ್ಮಗನನ್ನು ಕೂಗುತ್ತಾ ಇದ್ದಾಳೆ.

ಅಪ್ಪಾಜಿ ಒಮ್ಮೆ ನನ್ನ ಮಗನನ್ನು ಅವನ ಮುತ್ತಾತನ ಊರಿಗೆ ಕರೆದುಕೊಂಡು ಹೋಗಬೇಕು–ಅಲ್ಲಿ ನನ್ನ ತಾತ ವಾಸವಾಗಿದ್ದುದನ್ನು ತೋರಿಸಬೇಕು. ಹಳ್ಳಿಯಲ್ಲಿ ಹೊಲಗದ್ದೆಗಳನ್ನು ಅವನಿಗೆ ತೋರಿಸಬೇಕು. ಹುಲ್ಲುಬಣವೆಗಳನ್ನು ತೋರಿಸಬೇಕು. ಊರಿನ ಪಕ್ಕದಲ್ಲಿಹರಿಯುತ್ತಿರುವ ನದಿಯಲ್ಲಿ ಮೀನು ಹಿಡಿಯೋದನ್ನು ತೋರಿಸಬೇಕು. ಊರಿನಲ್ಲಿರುವ ಮಾವು, ಸೀಬೆ, ನೇರಳೆ, ಹುಣಸೆ ಮರಗಳನ್ನು ಹತ್ತಿ ಹಣ್ಣು ಕಿತ್ತು ತಿನ್ನುವುದಕ್ಕೆ ಕೂಡ ಹೇಳಬೇಕು. ಊರಿನಲ್ಲಿ ಮಾತನಾಡುವ ಆಡುಭಾಷೆಯನ್ನು ಕಲಿಸಬೇಕು. ಆ ಊರಿನ ಹಿರಿಯರನ್ನು ಇವನಿಗೆ ಪರಿಚಯ ಮಾಡಿಸಬೇಕು. ಆ ಊರಿನ ದೇವಸ್ಥಾನಕ್ಕೆ ಅವನನ್ನು ಕರೆದುಕೊಂಡು ಹೋಗಬೇಕು. ಅವನಿಗೂ ಊರಿನ ಬಾವಿಯಲ್ಲಿ ಸ್ನಾನ ಮಾಡಿಸಬೇಕು – ಅಂತೆಲ್ಲಾ ಆಸೆ ನನಗಿತ್ತು. ಆದರೆ ಏನು ಮಾಡೋದು ಈಗ ಆ ಊರೂ ಇಲ್ಲ, ಅಲ್ಲಿ ತಾತಾನೂ ಇಲ್ಲ.

ಅಪ್ಪಾಜಿ, ತಾತ ಮೊದಲೇ ತೀರಿಕೊಂಡುದ್ದು ಒಂದು ರೀತಿಯಲ್ಲಿ ಒಳ್ಳೇದೇ ಆಯ್ತು. ಆ ಊರಿನ ಪಕ್ಕದಲ್ಲಿ ಹರಿಯುತ್ತಿರುವ ನದಿಗೆ ಅಣೆಕಟ್ಟು ಕಟ್ಟಿದ ಮೇಲೆ ಆ ಊರೇ ಮುಳುಗಡೆಯಾದುದನ್ನು ನೋಡಲಿಲ್ಲ. ನದಿಯ ಆ ಕಡೆ ಪಕ್ಕದಲ್ಲಿ ಇದ್ದ ದೊಡ್ಡ ಕಾಡನ್ನು ಕಡಿದು ನಾಶಮಾಡಿದ್ದನ್ನು ನೋಡಲಿಲ್ಲ. ಒಳ್ಳೆಯ ಜನರ ಮೇಲೆ ಕೆಟ್ಟ ಜನ ದಬ್ಬಾಳಿಕೆ ಮಾಡುವುದನ್ನು ನೋಡಲಿಲ್ಲ. ಒಳ್ಳೇದಾಯ್ತು, ತಾತ ಈ ಎಲ್ಲ ಅನಾಚಾರಗಳನ್ನು ನೋಡೋದಕ್ಕೂ ಮೊದಲೇ ತೀರಿಕೊಂಡುಬಿಟ್ಟರು. ಅವರಿಗೆ ಇವೆಲ್ಲವನ್ನೂ ನೋಡಲಿಕ್ಕೆ ಸಾಧ್ಯವಾಗ್ತಿರಲಿಲ್ಲ.

ಅಪ್ಪಾಜಿ, ಈ ವರ್ಷ ಬೇಸಿಗೆ ರಜೆಗೆ ನಿಮ್ಮ ಮೊಮ್ಮಗನನ್ನು ನಿಮ್ಮ ಹತ್ತಿರ ಕರೆದುಕೊಂಡು ಬರ್ತೀನಿ. ಅವನೂ ಕೂಡ ತನ್ನ ತಾತನ ಹತ್ತಿರ ಕೂಡ ಸ್ವಲ್ಪ ದಿನ ಇದ್ದು ಬರಲಿ ಅಂತ ನನ್ನ ಆಸೆ. ಅವನ ತಾತನಿಗೆ ಗೊತ್ತಿರುವ ಕಥೆಗಳನ್ನು ಕೇಳಿ ತಿಳಿದುಕೊಳ್ಳಲಿ. ಅವನಿಗೆ ನೀವು ಒಂದು ವಿಷಯ ಹೇಳಬೇಕು ಅಪ್ಪಾಜಿ, ಅದೇನೆಂದರೆ ಒಂದು ಸಲ ಬ್ಯಾಂಕಿನಲ್ಲಿ ಕ್ಯಾಶಿಯರ್ ನನಗೆ ಕೊಡಬೇಕಾಗಿದ್ದ ಹಣಕ್ಕಿಂತ ಜಾಸ್ತಿ ಕೊಟ್ಟುಬಿಟ್ಟಿದ್ದ. ನೀವು ನನ್ನನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಅವನು ಕೊಟ್ಟಿದ್ದ ಹೆಚ್ಚುವರಿ ಹಣವನ್ನು ವಾಪಸ್ ಕೊಡಿಸಿದಿರಿ. ಇದನ್ನು ನಿಮ್ಮ ಮೊಮ್ಮಗನಿಗೆ ತಿಳಿಸಿ, ಆ ರೀತಿ ಮಾಡೋದು 'ದಡ್ಡತನ' ಅಲ್ಲ, ಬದಲಾಗಿ ಹಾಗೆ ಮಾಡೋದರಿಂದ ನಮ್ಮನ್ನು ಸದಾ ಕಾಲ ಎಚ್ಚರಿಕೆಯಿಂದ ಕಾಪಾಡಿಕೊಳ್ಳಲಿಕ್ಕೆ ಸಾಧ್ಯ ಆಗುತ್ತೆ ಅಂತ ಹೇಳಿ. ಅವನಿಗೆ ತನ್ನ ಅಂತರಾಳದ ದನಿಯನ್ನು ಆಲಿಸಲಿಕ್ಕೆ ಹೇಳಿಕೊಡಿ. ಯಾವುದೇ ವಸ್ತು ಇಂಪೋರ್ಟೆಡ್ ಆಗಿದ್ದ ಮಾತ್ರಕ್ಕೆ ಅದೆಲ್ಲ ಒಳ್ಳೆದಾಗಿರುವುದಿಲ್ಲ ಅಂತ ಹೇಳಿ. ಅವನು ನಿಮ್ಮ ಮಾತನ್ನು ಖಂಡಿತಾ ಅರ್ಥ ಮಾಡಿಕೊಳ್ಳುತ್ತಾನೆ.

ನಿಮ್ಮ ಸೊಸೆ ಊಟ ಮಾಡಲಿಕ್ಕೆ ಬನ್ನಿ ಅಂತ ಕರೆಯುತ್ತಾ ಇದ್ದಾಳೆ. ಬದನೆಕಾಯಿ ಎಣ್ಣೆಗಾಯಿ, ಬೇಳೆ ಸಾರು ಮಾಡಿದ್ದಾಳೆ. ನೀವು ಇಲ್ಲಿದ್ದಿದ್ದರೆ – ಆಹಾ, ಎಂಥ ರುಚಿಯಾದ ಊಟ! ಅಂತ ಹೇಳ್ತಾ ಇದ್ದಿರಿ. ನಿಮಗೆ ಊಟದಲ್ಲಿ ಇವೆರಡೂ ತುಂಬ ಇಷ್ಟ ಅಲ್ವಾ! ನೀವು ನಮ್ಮ ಜೊತೆಯಲ್ಲಿದ್ದಿದ್ದರೆ ನಮಗೆ ತಲೆ ಮೇಲೆ ಕಿರೀಟ ಇಟ್ಟ ಹಾಗೇ ಆಗುತ್ತಿತ್ತು.

ನಿಮ್ಮನ್ನು ನೆನಪು ಮಾಡಿಕೊಳ್ಳುತ್ತಾ,

ನಿಮ್ಮ ಮಗ .

ಪ್ರಶಾಂತ. ಅ



# ಜ್ಞಾನ ಮತ್ತು ತಂತ್ರ

ಜಗತ್ತಿನ ಯಾವುದೇ ಮೂಲೆಯಲ್ಲಿ ನಡೆಯುವ ಘಟನೆಯೊಂದನ್ನು ಅದು ನಡೆಯುತ್ತಿರುವ ಘಳಿಗೆಯಲ್ಲಿಯೇ ಅದನ್ನು ಅನುಭವಿಸುವ ಕಾಲದಲ್ಲಿ ನಾವಿದ್ದೇವೆ. ಉಪಗ್ರಹ, ಅಂತರ್ಜಾಲಗಳ ಮೂಲಕ ಟೆಲಿವಿಷನ್, ಲ್ಯಾಪ್‌ಟಾಪ್, ಮೊಬೈಲ್‌ಗಳಲ್ಲಿ ನಾವು ಬರಹ, ಚಿತ್ರ ಮತ್ತು ವಿಡಿಯೋಗಳನ್ನು ಹಂಚಿಕೊಳ್ಳಬಹುದು. ಈಮೇಲ್, ಚಾಟ್ ಮೆಸೇಂಜರ್, ಟ್ವಿಟರ್, ಫೇಸ್‌ಬುಕ್, ಗೂಗಲ್, ಯೂಟ್ಯೂಬ್‌ಗಳು ನಮ್ಮ ಕೈಯಲ್ಲಿರುವ ಮೊಬೈಲ್‌ನಲ್ಲಿರದಿದ್ದರೆ ನಾವು ಈ ಜಗತ್ತಿನ ಆಗುಹೋಗುಗಳಲ್ಲಿ ಭಾಗವಹಿಸದೇ ಹಿಂದುಳಿದವರಾಗಿ ಉಳಿದಿದ್ದೇವೆಯೇ ಎಂಬ ಕೀಳರಿಮೆ ಹುಟ್ಟುತ್ತದೆ. ತಂತ್ರಜ್ಞಾನ ಮತ್ತು ತಂತ್ರಾಂಶಗಳು ನಮ್ಮ ಬದುಕಿನ ಅವಿಭಾಜ್ಯ ಅಂಗವಾಗಿ ಬಿಟ್ಟಿವೆ. ವೈಯಕ್ತಿಕವಾಗಿ ನಮ್ಮೊಳಗಿರುವ ಭಾವನೆಗಳನ್ನು ಆ ಕೂಡಲೇ ಎಲ್ಲರೊಂದಿಗೆ ಹಂಚುತ್ತೇವೆ. ಅದರ ಕುರಿತು 'ಚಾಟಿ'ಸುತ್ತೇವೆ. ಸಾಮಾಜಿಕವಾಗಿ ವಿಚಾರಗಳನ್ನು ಹಂಚಲು, ವಿಷಯಗಳನ್ನು ತಿಳಿಸಲು ಮತ್ತು ತಿಳಿಯಲು ನಾವು ಅಂತರ್ಜಾಲದ ಮೂಲಕ ಸಾಮಾಜಿಕ ತಾಣಗಳನ್ನು ಅವಲಂಬಿಸುತ್ತೇವೆ. ನಮ್ಮ ಬದುಕಿನ ನಿರ್ವಹಣೆಯಲ್ಲಿ ನಾವು ಅಂತರ್ಜಾಲವನ್ನು ಬಹುಮಟ್ಟಿಗೆ ಅವಲಂಬಿತರಾಗಿದ್ದೇವೆ. ಕೆಲವೊಮ್ಮೆ ನಾವು ಹುಡುಕುವ ವಿಷಯಗಳು ಸರಿಯಾದ ರೀತಿಯಲ್ಲಿ ಗೂಗಲ್‌ನಲ್ಲಿ ನಮಗೆ ಸಿಗದಿದ್ದರೆ, ನಾವು ಅಸಹಾಯಕರಾಗುತ್ತೇವೆ. ಆ ವಿಷಯಗಳನ್ನು ಅಂತರ್ಜಾಲದಲ್ಲಿ ಹಾಕದಿರುವವರ ಕುರಿತು ಬೇಸರಪಡುತ್ತೇವೆ.



ತಾಂತ್ರಿಕ ನೆಲೆಯಲ್ಲಿ ಪ್ರಪಂಚವು ಮುಂದುವರಿಯುತ್ತಿರುವ ರೀತಿಯಲ್ಲಿ ನಾವು ವ್ಯಕ್ತಿಯಾಗಿ, ಸಾಮಾಜಿಕವಾಗಿ ಮತ್ತು ಒಂದು ರಾಷ್ಟ್ರವಾಗಿ ಮುಂದುವರಿಯುತ್ತಿದ್ದೇವೆಯೇ ಎಂಬುದು ಪ್ರಶ್ನೆ. ದೆಹಲಿ ಕರ್ನಾಟಕ ಸಂಘವು ಒಂದು ಸಂಸ್ಥೆಯಾಗಿ ತಂತ್ರಜ್ಞಾನವನ್ನು ತನ್ನ ಸದಸ್ಯರ ಮತ್ತು ಸಮಾಜಕ್ಕೆ ಉಪಯೋಗವಾಗುವ ರೀತಿಯಲ್ಲಿ ಹೇಗೆ ಉಪಯೋಗಿಸುತ್ತಿದೆ ಎಂಬ ಕುರಿತು ಸಂಘದ ಆಡಳಿತ ಮಂಡಳಿ ಚಿಂತನೆ ಮಾಡಬೇಕಾಗಿದೆ. ಸಂಘದ ಕಾರ್ಯಕ್ರಮಗಳು ನಡೆಯುತ್ತಿರುವಂತೆಯೇ ಅದು ನೀವಿದ್ದಲ್ಲಿ ಅಂತರ್ಜಾಲದ ಮೂಲಕ ವೆಬ್‌ಕಾಸ್ಟ್ ಆದರೆ ಹೇಗೆ? ನಡೆದ ನಂತರ ಕೂಡಲೇ ಯೂಟ್ಯೂಬ್‌ನಲ್ಲಿ ಸಿಕ್ಕಿದರೆ ಹೇಗೆ? ಮುಂಬರುವ ಕಾರ್ಯಕ್ರಮಗಳ ಕುರಿತು ಟ್ವಿಟರ್, ಫೇಸ್‌ಬುಕ್, ಈಮೇಲ್, ಚಾಟ್ ತಾಣಗಳಲ್ಲಿ ಮಾಹಿತಿ ದೊರಕಿದರೆ ಹೇಗೆ? ಇಂತಹ ತಂತ್ರಜ್ಞಾನಗಳನ್ನು ಅಳವಡಿಸಿದರೆ ನಡೆಸುವ ಕಾರ್ಯಕ್ರಮಗಳ ಸ್ವರೂಪ ಹೇಗಿರಬೇಕು? ಹೀಗೆ ಅನೇಕ ಗೊಂದಲಗಳ ಯೋಚನೆಗಳನ್ನು ಕೇಂದ್ರೀಕರಿಸಿ ಅದಕ್ಕೊಂದು ದಿಕ್ಕು ದೆಸೆ ನೀಡುವ ಕಾರ್ಯರೂಪವನ್ನು ತಯಾರಿಸುವ ಅಗತ್ಯವಿದೆ.

ಅಭಿಮತದ ಈ ಸಂಚಿಕೆ ಅದರ 24ನೇ ಸಂಪುಟದ ಮೊದಲ ಸಂಚಿಕೆ. ನಡೆದು ಬಂದಿರುವುದು ದುರ್ಗಮವಾದ ಹಾಗೂ ದೂರದ ದಾರಿಯಲ್ಲಿ. ಜತೆಗೆ ಹೆಜ್ಜೆ ಇಟ್ಟು ಹೊಸ ಹೊಸ ಮೈಲಿಗಲ್ಲನ್ನು ನಿರ್ಮಿಸಿದವರು ಹಲವರು. ಮುಂದುವರಿಯಬೇಕಾದ ದಾರಿ ಹೇಗೆ ಎಂಬ ಚಿಂತನೆ ಅಗತ್ಯ. ತಂತ್ರಜ್ಞಾನ ಬೆಳೆದಂತೆಲ್ಲಾ ಅಭಿಮತದ ಈಗಿನ ರೂಪ ಎಷ್ಟು ಸಮಯ ಹೀಗೆಯೇ ಉಳಿಯಬಹುದು ಮತ್ತು ಮುಂದೆ ಹೇಗೆ ಇರಬಹುದು ಎಂಬುದು ಕುತೂಹಲ.

ಸ್ವರೂಪ ಏನೇ ಇರಲಿ, ಸಂವಹನದ ಪ್ರಕ್ರಿಯೆ ಮುಂದುವರಿಯಲಿ. ಅ

*ಬಾಲಕೃಷ್ಣ ನಾಯ್ಕ್ ಡಿ.*

# ಕೆಬಿಎಲ್ ಮೊಬೈಲ್ - ನೀವು ಇದ್ದಲ್ಲಿಯೇ ನಿಮ್ಮ ಬ್ಯಾಂಕ್!!

## ಕೆಬಿಎಲ್ ಮೊಬೈಲ್

ಸುರಕ್ಷಿತ • ತ್ವರಿತ • ಸರಳ



ಕೆಬಿಎಲ್ ಮೊಬೈಲ್ ಬ್ಯಾಂಕಿಂಗ್‌ನ ವಿಶೇಷತೆಗಳು:

- ಶೀಘ್ರ ಮತ್ತು ಸುಲಭ ನೋಂದಣಿ
- ತ್ವರಿತ ಆ್ಯಕ್ಟಿವೇಶನ್
- ಸರಳವಾದ ಬಳಕೆಯ ವಿಧಾನ
- ಯಾವಾಗಬೇಕಾದರೂ, ಎಲ್ಲಿಗೆ ಬೇಕಾದರೂ ಹಣವನ್ನು ವರ್ಗಾಯಿಸಿ ಅಥವಾ ಹಣ ಪಡೆಯಿರಿ
- ಬಿಲ್‌ಗಳನ್ನು ಪಾವತಿಸಿರಿ

ಸುಲಭ ಬ್ಯಾಂಕಿಂಗ್ ಸೇವೆಗಾಗಿ ಕೆಬಿಎಲ್ ಮೊಬೈಲ್‌ಗೆ ಇಂದೇ ಅರ್ಜಿ ನೀಡಿರಿ

---



## ಮನಿಕ್ಲಿಕ್™

ಅಂತರ್ಜಾಲ ಬ್ಯಾಂಕಿಂಗ್

**ನಿಮ್ಮ ಖಾತೆಯೊಂದಿಗೆ ನಿರಂತರ ಸಂಪರ್ಕದ ಲಾಭ ಪಡೆಯಿರಿ.**

**ಯಾವುದೇ ಸಮಯದಲ್ಲಿ ಯಾವುದೇ ಸ್ಥಳದಿಂದ**

ಸುಲಭ ಸಾಧ್ಯತೆಯುಳ್ಳ ಸೇವೆಗಳು:

**•ವಿಚಾರಣೆಗಳು ಹಾಗೂ ಕೋರಿಕೆಗಳು •ಹಣ ವರ್ಗಾವಣೆ •ಟ್ರೇಡ್ ಫೈನಾನ್ಸ್ •ಕಾರ್ಪೋರೇಟ್ ಸೇವೆಗಳು •ಬಿಲ್ ಪಾವತಿ •SMS ಬ್ಯಾಂಕಿಂಗ್**

ಷರತ್ತುಗಳು ಅನ್ವಯಿಸುತ್ತವೆ.

ಹೆಚ್ಚಿನ ಮಾಹಿತಿಗಾಗಿ ಟೋಲ್ ಫ್ರೀ ಸಂಖ್ಯೆ 1800 425 1444ಗೆ ಕರೆ ಮಾಡಿ ಅಥವಾ ನಿಮ್ಮ ಸಮೀಪದ ಶಾಖೆಯನ್ನು ಸಂಪರ್ಕಿಸಿ

# ಕರ್ಣಾಟಕ ಬ್ಯಾಂಕ್ ಲಿ.

ನಿಮ್ಮ ಕುಟುಂಬದ ಬ್ಯಾಂಕ್, ಭಾರತದಾದ್ಯಂತ.

ನೋಂದಾಯಿತ ಹಾಗೂ ಪ್ರಧಾನ ಕಛೇರಿ: ಮಂಗಳೂರು - 575 002    ಇ-ಮೇಲ್: info@ktkbank.com ವೆಬ್‌ಸೈಟ್: www.karnatakabank.com

Delhi Karnataka Sangha Abhimatha Monthly,
October - 2013, Price Rs.1/- RNI Regn. No. 53405/91, DL-SW-1/4016/13-15
Printout Date : October 8th / 9th, Postal Date :10th / 11th, Total Pages-20


PURAVANKARA





Maravilloso homes! Sounds perfect for Purva Skydale. In fact, these homes speak of beauty in every aspect. Located off Sarjapur Main Road, Purva Skydale is just 10 minutes away from ORR IT hub. Experience an enchanting world of shimmering lakes and exquisite gardens, romantic Juliet balconies and a floating clubhouse. Fitted with all modern conveniences, these homes transcend the usual expectations of urban living and bring you magic in real life.

PURVA
SKYDALE
Maravilloso Homes,
off Sarjapur Main Road. 2 & 3 BHK Apts.









Call: +91 124 44 55 555 | www.puravankara.com | sales@puravankara.com

**Puravankara Projects Limited.** 130/1, Ulsoor Road, Bangalore - 560042. Sales office on Ulsoor Road open from 9 am to 6 pm on all days.

**Site:** Purva Skydale, Next to Purva Skywood, off Harlur Road, Bangalore – 560 102.

CREDAI

SANKALP

Editor: Balakrishna Naik D., Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615 and
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770